# ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000

(13.02.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 39ನೇ ಸಂಪುಟದ 1ನೇ ಸಂಚಿಕೆಯಲ್ಲಿ 87 ರಿಂದ 113ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


**ಅಧ್ಯಾಯ–I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ಬಾಲಕನಾಗಿರುವುದು ನಿಂತುಹೋಗಿರುವ ಬಾಲಕನಿಗೆ ಸಂಬಂಧಿಸಿದಂತೆ ವಿಚಾರಣೆಯ ಮುಂದುವರಿಕೆ

**ಅಧ್ಯಾಯ – II**

**ಕಾನೂನಿನ ಜೊತೆ ಸಂಘರ್ಷವಿರುವ ಬಾಲಕ**

4. ಬಾಲಕ ನ್ಯಾಯ ಮಂಡಲಿ
5. ಮಂಡಲಿಗೆ ಸಂಬಂಧಿಸಿದ ಪ್ರಕ್ರಿಯೆ, ಇತ್ಯಾದಿ
6. ಬಾಲಕ ನ್ಯಾಯ ಮಂಡಲಿಯ ಅಧಿಕಾರಗಳು
7. ಈ ಅಧಿನಿಯಮದ ಅಡಿಯಲ್ಲಿ ಅಧಿಕಾರ ಹೊಂದಿರದ ಮ್ಯಾಜಿಸ್ಟ್ರೇಟನು ಅನುಸರಿಸಬೇಕಾದ ಕಾರ್ಯವಿಧಾನ

7ಎ. ಯಾವುದೇ ನ್ಯಾಯಾಲಯದ ಮುಂದೆ ಬಾಲಕತ್ವದ ಕ್ಲೇಮನ್ನು ಮುಂದಿಟ್ಟಾಗ ಅನುಸರಿಸಬೇಕಾದ ಕಾರ್ಯವಿಧಾನ

8. ಪರಿವೀಕ್ಷಣಾಲಯಗಳು
9. ವಿಶೇಷ ಗೃಹಗಳು
10. ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನ ಬಂಧನ
11. ಬಾಲಕನ ಮೇಲೆ ರಕ್ಷಕನ ನಿಯಂತ್ರಣ
12. ಬಾಲಕನಿಗೆ ಜಾಮೀನು
13. ತಂದೆ–ತಾಯಿಗೆ ಅಥವಾ ಪಾಲಕನಿಗೆ ಅಥವಾ ಪರಿವೀಕ್ಷಣಾಧಿಕಾರಿಗೆ ಮಾಹಿತಿ
14. ಬಾಲಕನ ಬಗ್ಗೆ ಮಂಡಲಿಯಿಂದ ವಿಚಾರಣೆ
15. ಬಾಲಕನ ಬಗ್ಗೆ ಮಾಡಬಹುದಾದ ಆದೇಶ
16. ಬಾಲಕನ ವಿರುದ್ಧ ಮಾಡಬಾರದಂಥ ಆದೇಶಗಳು
17. ದಂಡ ಪ್ರಕ್ರಿಯಾ ಸಂಹಿತೆಯ VIIIನೇ ಅಧ್ಯಾಯದ ಅಡಿಯಲ್ಲಿನ ವ್ಯವಹರಣೆಯು ಬಾಲಕನ ವಿರುದ್ಧ ಸಕ್ಷಮವಲ್ಲ
18. ಬಾಲಕನ ಮತ್ತು ಬಾಲಕನಲ್ಲದ ವ್ಯಕ್ತಿಯ ಬಗ್ಗೆ ಯಾವುದೇ ಜಂಟಿ ವ್ಯವಹರಣೆ ನಡೆಸದಿರುವುದು
19. ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಅನರ್ಹತೆಯನ್ನು ತೆಗೆದುಹಾಕುವುದು
20. ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ
21. ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಯಲ್ಲಿ ಒಳಗೊಂಡ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನ ಅಥವಾ ಪಾಲನೆ ಮತ್ತು ರಕ್ಷಣೆ ಅಗತ್ಯತೆಯಿರುವ ಮಗುವಿನ ಹೆಸರು, ಇತ್ಯಾದಿಯ ಪ್ರಕಟಣೆಗೆ ನಿಷೇಧ
22. ತಪ್ಪಿಸಿಕೊಂಡ ಬಾಲಕನಿಗೆ ಸಂಬಂಧಿಸಿದಂತೆ ಉಪಬಂಧ
23. ಬಾಲಕನ ಅಥವಾ ಮಗುವಿನ ಮೇಲಿನ ಕ್ರೌರ್ಯಕ್ಕಾಗಿ ಶಿಕ್ಷೆ
24. ಬಾಲಕನನ್ನು ಅಥವಾ ಮಗುವನ್ನು ಭಿಕ್ಷೆ ಬೇಡುವುದಕ್ಕಾಗಿ ತೊಡಗಿಸುವುದು
25. ಬಾಲಕನಿಗೆ ಅಥವಾ ಮಗುವಿಗೆ ಮತ್ತುಬರಿಸುವ ಮದ್ಯವನ್ನು ಅಥವಾ ನಿದ್ರಾಜನಕ ಔಷಧವನ್ನು ಅಥವಾ ಮನೋದ್ರೇಕಕಾರಿ ವಸ್ತುವನ್ನು ಕೊಟ್ಟಿದ್ದಕ್ಕಾಗಿ ದಂಡನೆ
26. ಕೆಲಸದಲ್ಲಿರುವ ಬಾಲಕನ ಅಥವಾ ಮಗುವಿನ ಶೋಷಣೆ
27. ವಿಶೇಷ ಅಪರಾಧಗಳು

28. ಪರ್ಯಾಯ ದಂಡನೆ

## ಅಧ್ಯಾಯ – III

## ಪಾಲನೆ ಮತ್ತು ರಕ್ಷಣೆಯ ಅಗತ್ಯತೆಯಿರುವ ಮಗು

29. ಶಿಶು ಕಲ್ಯಾಣ ಸಮಿತಿ
30. ಸಮಿತಿಗೆ ಸಂಬಂಧಿಸಿದ ಕಾರ್ಯವಿಧಾನ, ಇತ್ಯಾದಿ
31. ಸಮಿತಿಯ ಅಧಿಕಾರಗಳು
32. ಸಮಿತಿಯ ಮುಂದೆ ಹಾಜರುಪಡಿಸುವುದು
33. ವಿಚಾರಣೆ
34. ಮಕ್ಕಳ ಗೃಹಗಳು
35. ಪರಿವೀಕ್ಷಣೆ
36. ಸಾಮಾಜಿಕ ಪರಿಶೀಲನೆ
37. ಆಶ್ರಯ ಗೃಹಗಳು
38. ವರ್ಗಾವಣೆ
39. ಹಿಂದಕ್ಕೆ ಒಪ್ಪಿಸಿಕೊಡುವುದು

## ಅಧ್ಯಾಯ — IV

## ಪುನರ್ವಸತಿ ಮತ್ತು ಸಮಾಜದಲ್ಲಿ ಪುನಃ ಬೆರೆಯುವುದು

40. ಪುನರ್ವಸತಿ ಮತ್ತು ಸಮಾಜದಲ್ಲಿ ಪುನಃ ಬೆರೆಯುವುದು
41. ದತ್ತು ಸ್ವೀಕಾರ
42. ಸಾಕಿ ಸಲಹುವುದು
43. ಪ್ರಾಯೋಜಕತ್ವ
44. ಅನುಪಾಲನಾ ಸಂಸ್ಥೆ
45. ಸಂಪರ್ಕ ಮತ್ತು ಸಮನ್ವಯ

## ಅಧ್ಯಾಯ — V

## ಸಂಕೀರ್ಣ

46. ಬಾಲಕನ ಅಥವಾ ಮಗುವಿನ ತಂದೆ- ತಾಯಿ ಅಥವಾ ಪಾಲಕನು ಹಾಜರಿರುವುದು
47. ಬಾಲಕನ ಅಥವಾ ಮಗುವಿನ ಹಾಜರಾತಿಗೆ ವಿನಾಯಿತಿ
48. ಅಪಾಯಕಾರಿ ರೋಗದಿಂದ ನರಳುತ್ತಿರುವ ಬಾಲಕನನ್ನು ಅಥವಾ ಮಗುವನ್ನು ಅನುಮೋದಿತ ಸ್ಥಳಕ್ಕೆ ಒಪ್ಪಿಸುವುದು ಮತ್ತು ಅವನ ಬಗ್ಗೆ ಮುಂದಿನ ಏರ್ಪಾಡು
49. ವಯಸ್ಸಿನ ಬಗ್ಗೆ ಪೂರ್ವಭಾವನೆ ಮತ್ತು ನಿರ್ಧರಣೆ
50. ಬಾಲಕನನ್ನು ಅಥವಾ ಮಗುವನ್ನು ಅಧಿಕಾರ ವ್ಯಾಪ್ತಿಯ ಸ್ಥಳದ ಹೊರಗೆ ಕಳುಹಿಸುವುದು
51. ವರದಿಗಳನ್ನು ರಹಸ್ಯವೆಂದು ಪರಿಗಣಿಸುವುದು
52. ಅಪೀಲುಗಳು
53. ಪುನರೀಕ್ಷಣೆ
54. ವಿಚಾರಣೆಗಳಲ್ಲಿ, ಅಪೀಲುಗಳಲ್ಲಿ ಮತ್ತು ಪುನರೀಕ್ಷಣಾ ವ್ಯವಹರಣೆಗಳಲ್ಲಿ ಪ್ರಕ್ರಿಯೆ
55. ಆದೇಶಗಳನ್ನು ತಿದ್ದುಪಡಿ ಮಾಡಲು ಅಧಿಕಾರ
56. ಬಾಲಕನನ್ನು ಅಥವಾ ಮಗುವನ್ನು ಬಿಡುಗಡೆ ಮಾಡಲು ಮತ್ತು ವರ್ಗಾವಣೆ ಮಾಡಲು ಪ್ರಾಧಿಕಾರದ ಅಧಿಕಾರ
57. ಈ ಅಧಿನಿಯಮದ ಅಡಿಯಲ್ಲಿನ ಮಕ್ಕಳ ಗೃಹಗಳ ಮತ್ತು ಭಾರತದ ವಿವಿಧ ಭಾಗಗಳಲ್ಲಿನ ಅಂಥದೇ ಸ್ವರೂಪದ ಮಕ್ಕಳ ಗೃಹಗಳ ನಡುವೆ ವರ್ಗಾವಣೆ
58. ಅಸ್ವಸ್ಥ ಮನಸ್ಸಿನ ಅಥವಾ ಕುಷ್ಠರೋಗಪೀಡಿತ ಅಥವಾ ಮಾದಕವಸ್ತು ವ್ಯಸನಿಯಾದ ಬಾಲಕನ ಅಥವಾ ಮಗುವಿನ ವರ್ಗಾವಣೆ
59. ಸ್ಥಳನಿಯೋಜನೆ ಮೇಲೆ ಬಾಲಕನ ಅಥವಾ ಮಗುವಿನ ಬಿಡುಗಡೆ ಮತ್ತು ಗೈರುಹಾಜರಿ
60. ತಂದೆ- ತಾಯಿಯಿಂದ ಕೊಡುಗೆ
61. ನಿಧಿ
62. ಕೇಂದ್ರ, ರಾಜ್ಯ, ಜಿಲ್ಲಾ ಮತ್ತು ನಗರ ಸಲಹಾ ಮಂಡಲಿಗಳು

62ಎ. ಈ ಅಧಿನಿಯಮದ ಜಾರಿಗೆ ಜವಾಬ್ದಾರಿ ಹೊಂದಿರುವ ಮಕ್ಕಳ ರಕ್ಷಣಾ ಘಟಕದ ರಚನೆ
63. ಬಾಲಕರ ವಿಶೇಷ ಪೊಲೀಸ್ ಘಟಕ
64. ಈ ಅಧಿನಿಯಮದ ಪ್ರಾರಂಭದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕ
65. ಬಂಧಪತ್ರಗಳಿಗೆ ಸಂಬಂಧಿಸಿದ ಪ್ರಕ್ರಿಯೆ
66. ಅಧಿಕಾರಗಳ ಪ್ರತ್ಯಾಯೋಜನೆ
67. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
68. ನಿಯಮಗಳನ್ನು ರಚಿಸಲು ಅಧಿಕಾರ
69. ನಿರಸನ ಮತ್ತು ಉಳಿಸುವಿಕೆಗಳು
70. ತೊಂದರೆಗಳನ್ನು ನಿವಾರಿಸಲು ಅಧಿಕಾರ

## ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000

(2000ದ ಅಧಿನಿಯಮ ಸಂಖ್ಯೆ 56)

[30ನೇ ಡಿಸೆಂಬರ್, 2000]

ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರಿಗೆ ಮತ್ತು ಪಾಲನೆ ಹಾಗೂ ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳಿಗೆ ಸಂಬಂಧಿಸಿದಂತೆ, ಅವರ ಅಭಿವೃದ್ಧಿಪರ ಅಗತ್ಯತೆಗಳನ್ನು ಪೂರೈಸುವ ಮೂಲಕ ಯುಕ್ತ ಪಾಲನೆ, ರಕ್ಷಣೆ ಮತ್ತು ಉಪಚಾರವನ್ನು ಒದಗಿಸುವ ಮೂಲಕ ಹಾಗೂ ಮಕ್ಕಳ ಅತ್ಯುತ್ತಮ ಹಿತದೃಷ್ಟಿಯಿಂದ ವಿಷಯಗಳ ನ್ಯಾಯನಿರ್ಣಯ ಮತ್ತು ವಿಲೇವಾರಿ ಮಾಡುವಲ್ಲಿ ಮಕ್ಕಳ ಬಗ್ಗೆ ಸ್ನೇಹಪರ ಮನೋಭಾವವನ್ನು ಅಳವಡಿಸಿಕೊಳ್ಳುವ ಮೂಲಕ ಅವರಿಗೆ ಅಂತಿಮ ಪುನರ್‌ವಸತಿ ಕಲ್ಪಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಸಂವಿಧಾನವು, 15ನೇ ಅನುಚ್ಛೇದದ (3)ನೇ ಖಂಡ, 39ನೇ ಅನುಚ್ಛೇದದ (ಇ) ಮತ್ತು (ಎಫ್) ಖಂಡಗಳು, 45ನೇ ಮತ್ತು 47ನೇ ಅನುಚ್ಛೇದಗಳೂ ಸೇರಿದಂತೆ ಬೇರೆ ಬೇರೆ ಉಪಬಂಧಗಳಲ್ಲಿ ಮಕ್ಕಳ ಎಲ್ಲ ಅಗತ್ಯತೆಗಳನ್ನು ಪೂರೈಸಲಾಗಿದೆಯೆಂಬುದನ್ನು ಮತ್ತು ಅವರ ಮೂಲಭೂತ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳುವ ಪ್ರಾಥಮಿಕ ಜವಾಬ್ದಾರಿಯನ್ನು ರಾಜ್ಯಕ್ಕೆ ವಿಧಿಸಿರುವುದರಿಂದ;

ಅಲ್ಲದೆ, ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಾಮಾನ್ಯ ಸಭೆಯು 1989ರ ನವೆಂಬರ್ 20 ರಂದು ಮಕ್ಕಳ ಹಕ್ಕುಗಳ ಮೇಲೆ ಒಂದು ಒಡಂಬಡಿಕೆಯನ್ನು ಅಂಗೀಕರಿಸಿರುವುದರಿಂದ;

ಅಲ್ಲದೆ, ಮಕ್ಕಳ ಹಕ್ಕುಗಳ ಮೇಲಿನ ಒಡಂಬಡಿಕೆಯು ಮಕ್ಕಳ ಅತ್ಯುತ್ತಮ ಹಿತಾಸಕ್ತಿಗಳನ್ನು ಸುನಿಶ್ಚಿತಗೊಳಿಸಿಕೊಳ್ಳುವಲ್ಲಿ ಅದರ ಎಲ್ಲ ಪಕ್ಷಕಾರ ರಾಷ್ಟ್ರಗಳು ಅನುಸರಿಸಬೇಕಾದ ಆಧಾರಾಂಶಗಳನ್ನು ಗೊತ್ತುಪಡಿಸಿರುವುದರಿಂದ;

ಅಲ್ಲದೆ, ಮಕ್ಕಳ ಹಕ್ಕುಗಳ ಮೇಲಿನ ಒಡಂಬಡಿಕೆಯು ಬಲಿಪಶುವಾದ ಮಕ್ಕಳನ್ನು ಸಾಧ್ಯವಾದಷ್ಟು ಮಟ್ಟಿಗೆ ನ್ಯಾಯಿಕ ವ್ಯವಹರಣೆಗಳಿಗೆ ಗುರಿಪಡಿಸದೆ ಸಾಮಾಜಿಕ ಜೀವನದಲ್ಲಿ ಪುನಃ ಒಂದಾಗಿ ಬೆರೆಯುವಂತೆ ಮಾಡುವುದಕ್ಕೆ ಒತ್ತು ನೀಡಿರುವುದರಿಂದ;

ಅಲ್ಲದೆ, ಭಾರತ ಸರ್ಕಾರವು 1992ರ ಡಿಸೆಂಬರ್ 11 ರಂದು, ಒಡಂಬಡಿಕೆಯನ್ನು ಅನುಸಮರ್ಥಿಸಿರುವುದರಿಂದ;

ಅಲ್ಲದೆ, ಮಕ್ಕಳ ಹಕ್ಕುಗಳ ಮೇಲಿನ ಒಡಂಬಡಿಕೆಯಲ್ಲಿ ಗೊತ್ತುಪಡಿಸಲಾದ ಆಧಾರಾಂಶಗಳನ್ನು, 1985ರ ಬಾಲಕ ನ್ಯಾಯಾಡಳಿತದ ಸಂಯುಕ್ತ ರಾಷ್ಟ್ರ ಸಂಸ್ಥೆಯ ಕನಿಷ್ಠ ಆಧಾರಾಂಶ ನಿಯಮಗಳನ್ನು, (ಬೀಜಿಂಗ್ ನಿಯಮಗಳು) ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿರುವ ಬಾಲಕರ ರಕ್ಷಣೆಯ ಸಂಯುಕ್ತ ರಾಷ್ಟ್ರ ಸಂಸ್ಥೆಯ ನಿಯಮಗಳನ್ನು (1990), ಮತ್ತು ಸಂಬಂಧಿಸಿದ ಇತರ ಎಲ್ಲ ಅಂತರ ರಾಷ್ಟ್ರೀಯ ಲಿಖಿತಗಳನ್ನು ಗಮನದಲ್ಲಿಟ್ಟುಕೊಂಡು ಬಾಲಕರಿಗೆ ಸಂಬಂಧಿಸಿದಂತೆ ಈಗಿರುವ ಕಾನೂನನ್ನು ಪುನಃ ಅಧಿನಿಯಮಿತಿಗೊಳಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಐವತ್ತೊಂದನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಿಂದ* ಜಾರಿಗೆ ಬರತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಇತರ ಕಾನೂನಿನ ಅಡಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರ ಬಂಧನ, ಪ್ರಾಸಿಕ್ಯೂಷನ್, ದಂಡ ಅಥವಾ ಕಾರಾವಾಸದ ಶಿಕ್ಷೆಯನ್ನು ಒಳಗೊಳ್ಳುವ ಎಲ್ಲ ಪ್ರಕರಣಗಳಿಗೂ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಲಹಾ ಮಂಡಲಿ" ಎಂದರೆ 62ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಸಂದರ್ಭಾನುಸಾರವಾಗಿ ಕೇಂದ್ರ ಅಥವಾ ರಾಜ್ಯ ಸಲಹಾ ಮಂಡಲಿ ಅಥವಾ ಜಿಲ್ಲೆ ಮತ್ತು ನಗರಮಟ್ಟದ ಸಲಹಾ ಮಂಡಲಿ;

(ಎಎ) "ದತ್ತಕ" ಎಂದರೆ ಜನ್ಮ ಕೊಟ್ಟ ತಂದೆತಾಯಿಗಳಿಂದ ದತ್ತಕ ಮಗುವು ಯಾವ ಪ್ರಕ್ರಿಯೆಯ ಮೂಲಕ ಶಾಶ್ವತವಾಗಿ ಪ್ರತ್ಯೇಕವಾಗುವುದೋ ಮತ್ತು ಆ ಸಂಬಂಧಕ್ಕೆ ಸೇರಿರುವ ಎಲ್ಲ ಹಕ್ಕುಗಳೊಂದಿಗೆ, ವಿಶೇಷಾಧಿಕಾರಗಳೊಂದಿಗೆ ಮತ್ತು ಜವಾಬ್ದಾರಿಗಳೊಂದಿಗೆ ತನ್ನ ದತ್ತಕ ತಂದೆ ತಾಯಿಗಳಿಗೆ ಔರಸ ಮಗುವೆನಿಸುವುದೋ ಆ ಪ್ರಕ್ರಿಯೆ;

(ಬಿ) "ಭಿಕ್ಷೆ ಬೇಡುವುದು" ಎಂದರೆ,–

(i) ಸಾರ್ವಜನಿಕ ಸ್ಥಳದಲ್ಲಿ ಭಿಕ್ಷೆಯನ್ನು ಯಾಚಿಸುವುದು ಅಥವಾ ಸ್ವೀಕರಿಸುವುದು ಅಥವಾ ಯಾವುದೇ ನೆಪದಲ್ಲಿಯೇ ಆಗಲಿ ಭಿಕ್ಷೆಯನ್ನು ಯಾಚಿಸುವ ಅಥವಾ ಸ್ವೀಕರಿಸುವ ಉದ್ದೇಶಕ್ಕಾಗಿ ಯಾವುದೇ ಖಾಸಗಿ ಆವರಣವನ್ನು ಪ್ರವೇಶಿಸುವುದು;

(ii) ಭಿಕ್ಷೆಯನ್ನು ಪಡೆಯುವ ಅಥವಾ ಬಲಾತ್ಕಾರದಿಂದ ಪಡೆಯುವ ಉದ್ದೇಶದಿಂದ ಅವನದೇ ಅಥವಾ ಇತರೆ ಯಾರೇ ವ್ಯಕ್ತಿಯ ಅಥವಾ ಪ್ರಾಣಿಯ ಯಾವುದೇ ಹುಣ್ಣು, ಗಾಯ, ಕ್ಷತಿ, ಅಂಗವಿಕಲತೆ ಅಥವಾ ಕಾಯಿಲೆಯನ್ನು ತೋರಿಸುವುದು ಅಥವಾ ಪ್ರದರ್ಶಿಸುವುದು;

(ಸಿ) "ಮಂಡಲಿ" ಎಂದರೆ 4ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಬಾಲಕ ನ್ಯಾಯ ಮಂಡಲಿ;

(ಡಿ) "ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಗು" ಎಂದರೆ,–

(i) ಯಾವುದೇ ಮನೆ ಅಥವಾ ನಿಶ್ಚಿತ ವಾಸಸ್ಥಳ ಅಥವಾ ನೆಲೆಯನ್ನು ಹೊಂದಿಲ್ಲವೆಂದು ಮತ್ತು ಹೇಳಿಕೊಳ್ಳುವಂಥ ಯಾವುದೇ ಜೀವನೋಪಾಯವಿಲ್ಲವೆಂದು ಕಂಡುಬರುವ;

(iಎ) ಭಿಕ್ಷೆ ಬೇಡುತ್ತಿರುವುದಾಗಿ ಅಥವಾ ಬೀದಿಯ ಮಗುವಾಗಿ ಅಥವಾ ಕೆಲಸ ಮಾಡುವ ಮಗುವಾಗಿ ಕಂಡು ಬರುವ;

(ii) ಒಬ್ಬ ವ್ಯಕ್ತಿಯ ಜೊತೆ (ಅವನು ಮಗುವಿನ ಪಾಲಕನಾಗಿರಲಿ ಅಥವಾ ಇಲ್ಲದಿರಲಿ) ವಾಸವಾಗಿರುವ ಮತ್ತು ಅಂಥ ವ್ಯಕ್ತಿಯು,–

(ಎ) ಮಗುವನ್ನು ಕೊಲ್ಲಲು ಅಥವಾ ಗಾಯಗೊಳಿಸಲು ಬೆದರಿಕೆ ಹಾಕಿರುವ ಮತ್ತು ಬೆದರಿಕೆಯನ್ನು ಕಾರ್ಯರೂಪಕ್ಕೆ ತರುವ ಸಾಧ್ಯತೆಯಿರುವ ಅಂಥ ವ್ಯಕ್ತಿ; ಅಥವಾ

(ಬಿ) ಇತರೆ ಯಾವುದೇ ಮಗುವನ್ನು ಅಥವಾ ಮಕ್ಕಳನ್ನು ಕೊಂದಿದ್ದರೆ, ದುರಾಚಾರಕ್ಕೊಳಪಡಿಸಿದ್ದರೆ ಅಥವಾ ನಿರ್ಲಕ್ಷಿಸಿದ್ದರೆ ಮತ್ತು ಅಂಥ ಮಗುವನ್ನು ಕೊಲ್ಲುವ, ದುರಾಚಾರಕ್ಕೊಳಪಡಿಸುವ ಅಥವಾ ನಿರ್ಲಕ್ಷಿಸುವ ಸಾಧ್ಯತೆಯಿರುವ ಅಂಥ ವ್ಯಕ್ತಿ;

(iii) ಮಾನಸಿಕವಾಗಿ ಅಥವಾ ದೈಹಿಕವಾಗಿ ದೋಷಪೂರ್ಣವಾಗಿರುವ ಅಥವಾ ಆಶ್ರಯ ನೀಡಲು ಅಥವಾ ಯೋಗಕ್ಷೇಮ ನೋಡಿಕೊಳ್ಳಲು ಯಾರೂ ಇಲ್ಲದ, ರೋಗಗ್ರಸ್ಥರಾದ ಅಥವಾ ಮಾರಕ ಖಾಯಿಲೆಯಿಂದ ಅಥವಾ ವಾಸಿಯಾಗದ ಕಾಯಿಲೆಯಿಂದ ಬಳಲುತ್ತಿರುವ;

(iv) ತಂದೆ-ತಾಯಿ ಅಥವಾ ಪಾಲಕನನ್ನು ಹೊಂದಿರುವ ಆದರೆ ಅಂಥ ತಂದೆ-ತಾಯಿ ಅಥವಾ ಪಾಲಕನು ಮಗುವಿನ ಮೇಲೆ ನಿಯಂತ್ರಣವನ್ನು ಚಲಾಯಿಸಲು ಅನರ್ಹನಾಗಿರುವ ಅಥವಾ ಅಶಕ್ತನಾಗಿರುವ;

(v) ತಂದೆ-ತಾಯಿ ಇಲ್ಲದ ಮತ್ತು ಯಾರೂ ಅವನ ಪಾಲನೆಗೆ ಇಚ್ಛಿಸದ ಅಥವಾ ತಂದೆ-ತಾಯಿಯರು ಅವನನ್ನು ಪರಿತ್ಯಜಿಸಿರುವ ಅಥವಾ ಬಿಟ್ಟುಕೊಟ್ಟಿರುವ ಅಥವಾ ಕಾಣೆಯಾಗಿರುವ ಮತ್ತು ಓಡಿಹೋಗಿರುವ ಮಗುವಾಗಿದ್ದರೆ ಮತ್ತು ಯುಕ್ತ ವಿಚಾರಣೆ ನಡೆಸಿದ ನಂತರವೂ ತಂದೆ-ತಾಯಿಯರು ಪತ್ತೆಯಾಗಿರದ;

(vi) ಲೈಂಗಿಕ ದುರುಪಯೋಗ ಅಥವಾ ಕಾನೂನುಬಾಹಿರ ಕೃತ್ಯಗಳ ಉದ್ದೇಶಕ್ಕಾಗಿ ಪೂರ್ಣವಾಗಿ ದುರುಪಯೋಗ, ಹಿಂಸೆ ಅಥವಾ ಶೋಷಣೆಗೊಳಗಾಗುತ್ತಿರುವ ಅಥವಾ ಒಳಗಾಗುವ ಸಾಧ್ಯತೆಯಿರುವ;

(vii) ಮಾದಕ ದ್ರವ್ಯದ ದುರುಪಯೋಗಕ್ಕೆ ಅಥವಾ ಅವುಗಳ ವ್ಯವಹಾರಕ್ಕೆ ಸುಲಭವಾಗಿ ಈಡಾಗುವುದಾಗಿ ಕಂಡುಬಂದ ಮತ್ತು ಅದರಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆಯಿರುವ;

(viii) ಅನ್ಯಾಯದ ಗಳಿಕೆಗಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿರುವ ಅಥವಾ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯಿರುವ;

(ix) ಯಾವುದೇ ಸಶಸ್ತ್ರ ಘರ್ಷಣೆ, ನಾಗರಿಕ ಕ್ಷೋಭೆ ಅಥವಾ ನೈಸರ್ಗಿಕ ವಿಪತ್ತಿಗೆ ಬಲಿಯಾಗಿರುವ

- ಒಂದು ಮಗು;

(ಇ) "ಮಕ್ಕಳ ಗೃಹ" ಎಂದರೆ ರಾಜ್ಯ ಸರ್ಕಾರವು ಅಥವಾ ಸ್ವಯಂಸೇವಾ ಸಂಸ್ಥೆಯು ಸ್ಥಾಪಿಸಿದ ಮತ್ತು 34ನೇ ಪ್ರಕರಣದ ಅಡಿಯಲ್ಲಿ ಆ ಸರ್ಕಾರವು ಪ್ರಮಾಣೀಕರಿಸಲಾದ ಸಂಸ್ಥೆ;

(ಎಫ್) "ಸಮಿತಿ" ಎಂದರೆ 29ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಮಕ್ಕಳ ಕಲ್ಯಾಣ ಸಮಿತಿ;

(ಜಿ) "ಸಕ್ಷಮ ಪ್ರಾಧಿಕಾರ" ಎಂದರೆ ಪಾಲನೆ ಮತ್ತು ಸಂರಕ್ಷಣೆಯ ಅಗತ್ಯತೆಯಿರುವ ಮಕ್ಕಳ ಸಂಬಂಧದಲ್ಲಿ ಸಮಿತಿ ಮತ್ತು ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರ ಸಂಬಂಧದಲ್ಲಿ ಮಂಡಲಿ;

(ಹೆಚ್) "ಸೂಕ್ತ ಸಂಸ್ಥೆ" ಎಂದರೆ ಮಗುವಿನ ಜವಾಬ್ದಾರಿಯನ್ನು ವಹಿಸಿಕೊಳ್ಳಲು ತಯಾರಿರುವ, ಸರ್ಕಾರದ ಅಥವಾ ನೋಂದಾಯಿತ ಸರ್ಕಾರೇತರ ಸಂಸ್ಥೆ ಅಥವಾ ಸ್ವಯಂಸೇವಾ ಸಂಸ್ಥೆ ಮತ್ತು ಸಕ್ಷಮ ಪ್ರಾಧಿಕಾರದ ಶಿಫಾರಸಿನ ಮೇಲೆ ರಾಜ್ಯ ಸರ್ಕಾರಕ್ಕೆ ಸೂಕ್ತವೆಂದು ಕಂಡುಬಂದಂಥ ಸಂಸ್ಥೆ;

(ಐ) "ಸೂಕ್ತ ವ್ಯಕ್ತಿ" ಎಂದರೆ ಮಗುವಿನ ಜವಾಬ್ದಾರಿಯನ್ನು ವಹಿಸಿಕೊಳ್ಳಲು ತಯಾರಿರುವ ಸಮಾಜ ಕಾರ್ಯಕರ್ತ ಅಥವಾ ಇತರ ಯಾರೇ ವ್ಯಕ್ತಿ ಮತ್ತು ಮಗುವನ್ನು ಸ್ವೀಕರಿಸಲು ಮತ್ತು ಅದರ ಪಾಲನೆಯನ್ನು ನೋಡಿಕೊಳ್ಳಲು ಸೂಕ್ತನಿರುವನೆಂದು ಸಕ್ಷಮ ಪ್ರಾಧಿಕಾರವು ಪರಿಗಣಿಸಿರುವ ವ್ಯಕ್ತಿ ;

(ಜೆ) ಮಗುವಿಗೆ ಸಂಬಂಧಪಟ್ಟಂತೆ "ಪಾಲಕ" ಎಂದರೆ ಮಗುವಿನ ಸ್ವಾಭಾವಿಕ ಪಾಲಕ ಅಥವಾ ಮಗುವಿನ ಮೇಲೆ ವಾಸ್ತವಿಕ ಹೊಣೆ ಅಥವಾ ನಿಯಂತ್ರಣ ಹೊಂದಿರುವ ಯಾರೇ ಇತರೆ ವ್ಯಕ್ತಿ ಮತ್ತು ಆ ಪ್ರಾಧಿಕಾರದ ಮುಂದಿರುವ ವ್ಯವಹರಣೆಗಳ ಸಂದರ್ಭದಲ್ಲಿ ಪಾಲಕನೆಂಬುದಾಗಿ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆದಿರುವ ವ್ಯಕ್ತಿ ;

(ಕೆ) "ಬಾಲಕ" ಅಥವಾ "ಮಗು" ಎಂದರೆ ಹದಿನೆಂಟು ವಯಸ್ಸು ತುಂಬಿರದ ವ್ಯಕ್ತಿ;

(ಎಲ್) "ಕಾನೂನಿನ ಜೊತೆ ಸಂಘರ್ಷವಿರುವ ಬಾಲಕ" ಎಂದರೆ ಒಂದು ಅಪರಾಧ ಮಾಡಿರುವನೆಂದು ಆಪಾದಿತನಾಗಿರುವ ಮತ್ತು ಅಂಥ ಅಪರಾಧವನ್ನು ಮಾಡಿದ ದಿನಾಂಕದಂದು ಹದಿನೆಂಟು ವರ್ಷ ವಯಸ್ಸು ತುಂಬಿರದ ಬಾಲಕ;

(ಎಂ) [* * *]

(ಎನ್) "ನಿದ್ರಾಜನಕ ಔಷಧ" ಮತ್ತು "ಮನೋದ್ರೇಕಕಾರಿ ವಸ್ತು" ಇವು ನಿದ್ರಾಜನಕ ಔಷಧ ಮತ್ತು ಮನೋದ್ರೇಕಕಾರಿ ವಸ್ತುಗಳ ಅಧಿನಿಯಮ, 1985 (1985ರ 61) ರಲ್ಲಿ ಅನುಕ್ರಮವಾಗಿ ಅವುಗಳಿಗೆ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು;

(ಒ) "ಪರಿವೀಕ್ಷಣಾಲಯ" ಎಂದರೆ ರಾಜ್ಯ ಸರ್ಕಾರದಿಂದ ಅಥವಾ ಸ್ವಯಂಸೇವಾ ಸಂಸ್ಥೆಯಿಂದ ಸ್ಥಾಪಿಸಲಾದ ಮತ್ತು ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರಿಗಾಗಿ ಪರಿವೀಕ್ಷಣಾಲಯವಾಗಿ 8ನೇ ಪ್ರಕರಣದ ಅಡಿಯಲ್ಲಿ ಆ ರಾಜ್ಯ ಸರ್ಕಾರದಿಂದ ಪ್ರಮಾಣೀಕೃತವಾದ ಪರಿವೀಕ್ಷಣಾಲಯ;

(ಪಿ) "ಅಪರಾಧ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ದಂಡನೀಯವಾದ ಅಪರಾಧ;

(ಕ್ಯೂ) "ಸುರಕ್ಷಿತ ಸ್ಥಳ" ಎಂದರೆ ಯಾವ ಸ್ಥಳದ ಪ್ರಭಾರವನ್ನು ಹೊಂದಿರುವ ವ್ಯಕ್ತಿಯು ಬಾಲಕನನ್ನು ತಾತ್ಕಾಲಿಕವಾಗಿ ಸ್ವೀಕರಿಸಲು ಮತ್ತು ಅವನ ಯೋಗಕ್ಷೇಮವನ್ನು ನೋಡಿಕೊಳ್ಳಲು ಇಚ್ಛೆಯುಳ್ಳವನಾಗಿದ್ದಾನೆಯೋ ಮತ್ತು ಯಾವುದು ಸಕ್ಷಮ ಪ್ರಾಧಿಕಾರದ ಅಭಿಪ್ರಾಯದಲ್ಲಿ ಆ ಬಾಲಕನಿಗೆ ಸುರಕ್ಷಿತ ಸ್ಥಳವಾಗಿರಬಹುದೋ (ಪೊಲೀಸ್ ಲಾಕಪ್ ಅಥವಾ ಜೈಲು ಆಗಿಲ್ಲದ) ಆ ಯಾವುದೇ ಸ್ಥಳ ಅಥವಾ ಸಂಸ್ಥೆ;

(ಆರ್) "ಗೊತ್ತುಪಡಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದುದು;

(ಎಸ್) "ಪರಿವೀಕ್ಷಣಾಧಿಕಾರಿ" ಎಂದರೆ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958ರ (1958ರ 20) ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಪರಿವೀಕ್ಷಣಾಧಿಕಾರಿಯಾಗಿ ನೇಮಕಗೊಂಡ ಅಧಿಕಾರಿ;

(ಟಿ) "ಸಾರ್ವಜನಿಕ ಸ್ಥಳ" ಎಂಬುದು ಅನೈತಿಕ ವ್ಯವಹಾರ (ಪ್ರತಿಬಂಧ) ಅಧಿನಿಯಮ, 1956 ರಲ್ಲಿ (1956ರ 104) ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಯು) "ಆಶ್ರಯ ಗೃಹ" ಎಂದರೆ 37ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಒಂದು ಗೃಹ ಅಥವಾ ಮಕ್ಕಳನ್ನು ಬಿಡುವ ಕೇಂದ್ರ ;

(ವಿ) "ವಿಶೇಷ ಗೃಹ" ಎಂದರೆ ಒಂದು ರಾಜ್ಯ ಸರ್ಕಾರದಿಂದ ಅಥವಾ ಒಂದು ಸ್ವಯಂಸೇವಾ ಸಂಸ್ಥೆಯಿಂದ ಸ್ಥಾಪಿಸಲಾದ ಮತ್ತು 9ನೇ ಪ್ರಕರಣದ ಅಡಿಯಲ್ಲಿ ಆ ಸರ್ಕಾರವು ಪ್ರಮಾಣೀಕರಿಸಿದ ಸಂಸ್ಥೆ;

(ಡಬ್ಲ್ಯೂ) "ವಿಶೇಷ ಬಾಲಕ ಪೊಲೀಸ್ ಘಟಕ" ಎಂದರೆ 63ನೇ ಪ್ರಕರಣದ ಅಡಿಯಲ್ಲಿ ಬಾಲಕರ ಅಥವಾ ಮಕ್ಕಳ ಮೇಲ್ವಿಚಾರಣೆಗಾಗಿ ಗೊತ್ತುಪಡಿಸಲಾದ ರಾಜ್ಯ ಪೊಲೀಸ್ ದಳದ ಘಟಕ;

(ಎಕ್ಸ್) ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ ಸಂವಿಧಾನದ 239ನೇ ಅನುಚ್ಛೇದದ ಅಡಿಯಲ್ಲಿ ರಾಷ್ಟ್ರಪತಿಯಿಂದ ನೇಮಕಗೊಂಡ ಆ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ;

(ವೈ) ಈ ಅಧಿನಿಯಮದಲ್ಲಿ ಉಪಯೋಗಿಸಲಾದ, ಆದರೆ ಪರಿಭಾಷಿಸಿರದ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ 2) ಪರಿಭಾಷಿಸಲಾದ ಎಲ್ಲಾ ಪದಗಳು ಮತ್ತು ಪದಾವಳಿಗಳು, ಆ ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವಂಥ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಬಾಲಕನಾಗಿರುವುದು ನಿಂತುಹೋಗಿರುವ ಒಬ್ಬ ಬಾಲಕನಿಗೆ ಸಂಬಂಧಿಸಿದಂತೆ ವಿಚಾರಣೆಯ ಮುಂದುವರಿಕೆ.–** ಕಾನೂನಿನ ಜೊತೆ ಸಂಘರ್ಷವಿರುವ ಒಬ್ಬ ಬಾಲಕನ ಅಥವಾ ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಗುವಿನ ವಿರುದ್ಧ ವಿಚಾರಣೆ ಆರಂಭಿಸಲಾಗಿರುವಲ್ಲಿ ಮತ್ತು ಅಂಥ ವಿಚಾರಣೆಯು ನಡೆಯುತ್ತಿರುವ ಕಾಲದಲ್ಲಿ ಆ ಬಾಲಕನು ಅಥವಾ ಮಗುವು ಹಾಗೆ ಬಾಲಕನಾಗಿರುವುದು ಅಥವಾ ಮಗುವಾಗಿರುವುದು ನಿಂತುಹೋದಾಗ, ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ ಸಹ, ಆ ವಿಚಾರಣೆಯನ್ನು ಮುಂದುವರಿಸಬಹುದು ಮತ್ತು ಅಂಥ ವ್ಯಕ್ತಿಯು ಒಬ್ಬ ಬಾಲಕನಾಗಿಯೇ ಅಥವಾ

ಒಂದು ಮಗುವಾಗಿಯೇ ಮುಂದುವರೆದಿದ್ದರೆ ಹೇಗೋ ಹಾಗೆ ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ ಆದೇಶಗಳನ್ನು ಮಾಡಬಹುದು.

## ಅಧ್ಯಾಯ – II

### ಕಾನೂನಿನ ಜೊತೆ ಸಂಘರ್ಷವಿರುವ ಬಾಲಕ

**4. ಬಾಲಕ ನ್ಯಾಯ ಮಂಡಲಿ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ 2) ಏನೇ ಅಡಕವಾಗಿದ್ದರೂ ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರ ಸಂಬಂಧದಲ್ಲಿ ಅಂಥ ಮಂಡಲಿಗಳಿಗೆ ಪ್ರದಾನ ಮಾಡಿದ ಅಥವಾ ವಿಧಿಸಿದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಅಧಿನಿಯಮ, 2006 ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ ಪ್ರತಿಯೊಂದು ಜಿಲ್ಲೆಗಾಗಿ ಒಂದು ಅಥವಾ ಹೆಚ್ಚು ಬಾಲಕ ನ್ಯಾಯ ಮಂಡಲಿಗಳನ್ನು ರಚಿಸಬಹುದು.

(2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಸಂದರ್ಭಾನುಸಾರ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಮತ್ತು ಕನಿಷ್ಠಪಕ್ಷ ಒಬ್ಬ ಮಹಿಳೆಯನ್ನೊಳಗೊಂಡ ಇಬ್ಬರು ಸಮಾಜ ಕಾರ್ಯಕರ್ತರಿಂದ ಕೂಡಿದ ಮಂಡಲಿಯು ನ್ಯಾಯಪೀಠವಾಗಿರತಕ್ಕದ್ದು ಮತ್ತು ಅಂಥ ಪ್ರತಿಯೊಂದು ನ್ಯಾಯಪೀಠವು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಸಂದರ್ಭಾನುಸಾರ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಮೂಲಕ ಪ್ರದಾನ ಮಾಡಲಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಮಂಡಲಿಯಲ್ಲಿರುವ ಮ್ಯಾಜಿಸ್ಟ್ರೇಟನನ್ನು ಪ್ರಧಾನ ಮ್ಯಾಜಿಸ್ಟ್ರೇಟ್ ಎಂಬುದಾಗಿ ಹೆಸರಿಸತಕ್ಕದ್ದು.

(3) ಯಾರೇ ಮ್ಯಾಜಿಸ್ಟ್ರೇಟನನ್ನು, ಮಗುವಿನ ಮನಶಾಸ್ತ್ರದಲ್ಲಿ ಮತ್ತು ಮಗುವಿನ ಕಲ್ಯಾಣಕ್ಕೆ ಸಂಬಂಧಿಸಿದಂತೆ ವಿಶೇಷ ಜ್ಞಾನವನ್ನು ಅಥವಾ ತರಬೇತಿಯನ್ನು ಹೊಂದಿದ್ದ ಹೊರತು, ಮಂಡಲಿಯ ಸದಸ್ಯನನ್ನಾಗಿ ನೇಮಕ ಮಾಡತಕ್ಕದ್ದಲ್ಲ ಮತ್ತು ಯಾರೇ ಸಮಾಜ ಕಾರ್ಯಕರ್ತನನ್ನು, ಕನಿಷ್ಠ ಪಕ್ಷ ಏಳು ವರ್ಷಗಳವರೆಗೆ ಮಕ್ಕಳ ಆರೋಗ್ಯಕ್ಕೆ, ವಿದ್ಯಾಭ್ಯಾಸಕ್ಕೆ ಅಥವಾ ಕಲ್ಯಾಣಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡಿದ್ದ ಹೊರತು ಮಂಡಲಿಯ ಸದಸ್ಯನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(4) ಮಂಡಲಿಯ ಸದಸ್ಯರ ಪದಾವಧಿಯು ಮತ್ತು ಅಂಥ ಸದಸ್ಯನು ರಾಜೀನಾಮೆ ಸಲ್ಲಿಸಬಹುದಾದ ವಿಧಾನವು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(5) ವಿಚಾರಣೆ ನಡೆಸಿದ ನಂತರ ಈ ಮುಂದಿನ ಸಂದರ್ಭಗಳಲ್ಲಿ ಮಂಡಲಿಯ ಯಾರೇ ಸದಸ್ಯನ ನೇಮಕವನ್ನು ರಾಜ್ಯ ಸರ್ಕಾರವು,–

(i) ಈ ಅಧಿನಿಯಮದ ಅಡಿಯಲ್ಲಿ ನಿಹಿತವಾಗಿರುವ ಅಧಿಕಾರವನ್ನು ದುರುಪಯೋಗ ಮಾಡಿಕೊಂಡ ದೋಷಿಯೆಂದು ಕಂಡುಬಂದಿದ್ದರೆ;

(ii) ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೆ ಮತ್ತು ಅಂಥ ಸಿದ್ಧದೋಷಿತ್ವವನ್ನು ವ್ಯತಿರಿಕ್ತಗೊಳಿಸಿಲ್ಲದಿದ್ದರೆ ಅಥವಾ ಅಂಥ ಅಪರಾಧದ ಸಂಬಂಧದಲ್ಲಿ ಪೂರ್ಣ ಕ್ಷಮಾದಾನ ನೀಡದಿದ್ದರೆ;

(iii) ಯಾವುದೇ ಸಮಂಜಸ ಕಾರಣವಿಲ್ಲದೆ ಒಂದಾದ ಮೇಲೊಂದರಂತೆ ಬರುವ ಮೂರು ತಿಂಗಳ ಕಾಲ ಮಂಡಲಿಯ ವ್ಯವಹರಣೆಗಳಲ್ಲಿ ಭಾಗವಹಿಸಲು ತಪ್ಪಿದರೆ ಅಥವಾ ಒಂದು ವರ್ಷದಲ್ಲಿ ಸೇರಿದ ಸಭೆಗಳಲ್ಲಿ ನಾಲ್ಕನೆಯ ಮೂರಕ್ಕಿಂತ ಕಡಿಮೆ ಸಂಖ್ಯೆಯ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ

– ಕೊನೆಗೊಳಿಸಬಹುದು.

**5. ಮಂಡಲಿಗೆ ಸಂಬಂಧಿಸಿದ ಪ್ರಕ್ರಿಯೆ, ಇತ್ಯಾದಿ.–** (1) ಮಂಡಲಿಯು ಗೊತ್ತುಪಡಿಸಬಹುದಾದಂಥ ಕಾಲಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿನ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು ಮಂಡಲಿಯ ಸಭೆ ನಡೆಯದಿದ್ದಾಗ ಒಬ್ಬ ಸದಸ್ಯನ ಮುಂದೆ ಹಾಜರುಪಡಿಸಬಹುದು.

(3) ಮಂಡಲಿಯ ಯಾರೇ ಸದಸ್ಯನು ಗೈರುಹಾಜರಿದ್ದಾಗ್ಯೂ ಮಂಡಲಿಯು ಕಾರ್ಯನಿರ್ವಹಿಸಬಹುದು, ಮತ್ತು ಆ ಮಂಡಲಿ ಮಾಡಿದ ಯಾವುದೇ ಆದೇಶವು ವ್ಯವಹರಣೆಗಳ ಯಾವುದೇ ಹಂತದಲ್ಲಿ ಯಾರೇ ಸದಸ್ಯನ ಗೈರು ಹಾಜರಿಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ:

ಪರಂತು, ಪ್ರಕರಣದ ಅಂತಿಮ ವಿಲೇವಾರಿಯ ಕಾಲದಲ್ಲಿ, ಪ್ರಧಾನ ಮ್ಯಾಜಿಸ್ಟ್ರೇಟನೂ ಸೇರಿದಂತೆ ಕನಿಷ್ಠ ಇಬ್ಬರು ಸದಸ್ಯರಾದರೂ ಹಾಜರಿರತಕ್ಕದ್ದು.

(4) ಮಧ್ಯಕಾಲೀನ ಅಥವಾ ಅಂತಿಮ ವಿಲೇವಾರಿಯಲ್ಲಿ ಮಂಡಲಿಯ ಸದಸ್ಯರೊಳಗೆ ಯಾವುದೇ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ, ಬಹುಮತದ ಅಭಿಪ್ರಾಯವು ನಿರ್ಣಾಯಕವಾಗಿರತಕ್ಕದ್ದು, ಆದರೆ, ಅಂಥ ಬಹುಮತದ ಅಭಿಪ್ರಾಯವಿಲ್ಲದಿರುವಲ್ಲಿ, ಪ್ರಧಾನ ಮ್ಯಾಜಿಸ್ಟ್ರೇಟನ ಅಭಿಪ್ರಾಯವೇ ನಿರ್ಣಾಯಕವಾದುದಾಗಿರತಕ್ಕದ್ದು.

**6. ಬಾಲಕ ನ್ಯಾಯ ಮಂಡಲಿಯ ಅಧಿಕಾರಗಳು.–** (1) ಯಾವುದೇ ಜಿಲ್ಲೆಗಾಗಿ ಮಂಡಲಿಯನ್ನು ರಚಿಸಿರುವಲ್ಲಿ, ಅಂಥ ಮಂಡಲಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ ಸಹ, ಆದರೆ, ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು, ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಅಡಿಯಲ್ಲಿನ ಎಲ್ಲ ವ್ಯವಹರಣೆಗಳ ಬಗ್ಗೆ ಮಾತ್ರವೇ ವ್ಯವಹರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಮಂಡಲಿಗೆ ಪ್ರದತ್ತವಾದ ಅಧಿಕಾರಗಳನ್ನು, ಉಚ್ಚ ನ್ಯಾಯಾಲಯವು ಮತ್ತು ಸೆಷನ್ಸ್ ನ್ಯಾಯಾಲಯವೂ ಸಹ, ಆ ವ್ಯವಹರಣೆಯು, ಅಪೀಲಿಗಾಗಿ, ಪುನರೀಕ್ಷಣೆಗಾಗಿ ಅಥವಾ ಅನ್ಯಥಾ ತಮ್ಮ ಮುಂದೆ ಬಂದಾಗ ಚಲಾಯಿಸಬಹುದು.

**7. ಈ ಅಧಿನಿಯಮದ ಅಡಿಯಲ್ಲಿ ಅಧಿಕಾರ ಹೊಂದಿರದ ಮ್ಯಾಜಿಸ್ಟ್ರೇಟನು ಅನುಸರಿಸಬೇಕಾದ ಕಾರ್ಯವಿಧಾನ.–** (1) ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ಹೊಂದಿರದ ಯಾರೇ ಮ್ಯಾಜಿಸ್ಟ್ರೇಟನು, ಈ ಅಧಿನಿಯಮದ ಯಾವುವೇ ಉಪಬಂಧಗಳ ಅಡಿಯಲ್ಲಿ (ಸಾಕ್ಷ್ಯವನ್ನು ಕೊಡುವ ಉದ್ದೇಶವನ್ನು ಹೊರತುಪಡಿಸಿ) ತನ್ನ ಮುಂದೆ ತರಲಾದ ವ್ಯಕ್ತಿಯು ಬಾಲಕನಾಗಿರುವನೆಂದು ಅಥವಾ ಮಗುವಾಗಿರುವನೆಂದು ಅಭಿಪ್ರಾಯಪಟ್ಟರೆ, ಅವನು, ಯಾವುದೇ ವಿಳಂಬ ಮಾಡದೆ ಅಂಥ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಆ ಬಾಲಕನನ್ನು ಅಥವಾ ಮಗುವನ್ನು ಮತ್ತು ವ್ಯವಹರಣೆಯ ದಾಖಲೆಯನ್ನು, ವ್ಯವಹರಣೆಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(2) ಯಾವ ಸಕ್ಷಮ ಪ್ರಾಧಿಕಾರಕ್ಕೆ (1)ನೇ ಉಪಪ್ರಕರಣದ ಅಡಿಯಲ್ಲಿ ವ್ಯವಹರಣೆಯನ್ನು ಕಳುಹಿಸಿಕೊಡಲಾಗಿದೆಯೋ, ಆ ಸಕ್ಷಮ ಪ್ರಾಧಿಕಾರವು, ಬಾಲಕನನ್ನು ಅಥವಾ ಮಗುವನ್ನು ಮೊದಲಿಗೆ ಅದರ ಮುಂದೆ ತಂದಿದ್ದರೆ ಹೇಗೋ ಹಾಗೆ ವಿಚಾರಣೆಯನ್ನು ನಡೆಸತಕ್ಕದ್ದು.

**7ಎ. ಯಾವುದೇ ನ್ಯಾಯಾಲಯದ ಮುಂದೆ ಬಾಲಕತ್ವದ ಕ್ಲೇಮನ್ನು ಮುಂದಿಟ್ಟಾಗ ಅನುಸರಿಸಬೇಕಾದ ಕಾರ್ಯ ವಿಧಾನ.–** (1) ಯಾವುದೇ ನ್ಯಾಯಾಲಯದ ಮುಂದೆ ಬಾಲಕತ್ವದ ಕ್ಲೇಮನ್ನು ಎತ್ತಿರುವಾಗ ಅಥವಾ ಆಪಾದಿತ ವ್ಯಕ್ತಿಯು ಅಪರಾಧ ಘಟಿಸಿದ ದಿನಾಂಕದಂದು ಬಾಲಕನಾಗಿದ್ದನೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಿರುವಾಗ, ನ್ಯಾಯಾಲಯವು, ಅಂಥ ವ್ಯಕ್ತಿಯ ವಯಸ್ಸನ್ನು ನಿರ್ಧರಿಸುವ ಬಗ್ಗೆ ಅವಶ್ಯವಾಗಬಹುದಾದಂಥ ವಿಚಾರಣೆಯನ್ನು ನಡೆಸತಕ್ಕದ್ದು, ಅಂಥ ಸಾಕ್ಷ್ಯವನ್ನು (ಆದರೆ ಅಫಿಡಾವಿಟ್ ಅಲ್ಲ) ತೆಗೆದುಕೊಳ್ಳತಕ್ಕದ್ದು ಮತ್ತು ಸಾಧ್ಯವಾಗಬಹುದಾದಷ್ಟು ಸಮೀಪದ ಅವನ ವಯಸ್ಸನ್ನು ತಿಳಿಸಿ, ಆ ವ್ಯಕ್ತಿಯು ಬಾಲಕನೇ ಅಥವಾ ಅಲ್ಲವೇ ಅಥವಾ ಮಗುವೇ ಅಥವಾ ಅಲ್ಲವೇ ಎಂಬ ಬಗ್ಗೆ ನಿರ್ಣಯವನ್ನು ದಾಖಲು ಮಾಡತಕ್ಕದ್ದು:

ಪರಂತು, ಯಾವುದೇ ನ್ಯಾಯಾಲಯದ ಮುಂದೆ ಬಾಲಕತ್ವದ ಕ್ಲೇಮನ್ನು ಎತ್ತಬಹುದು ಮತ್ತು ಪ್ರಕರಣವು ಅಂತಿಮವಾಗಿ ವಿಲೆಯಾದ ನಂತರವೂ ಕೂಡ ಯಾವುದೇ ಹಂತದಲ್ಲಿ, ಅದನ್ನು ಅಂಗೀಕರಿಸತಕ್ಕದ್ದು ಮತ್ತು ಅಂಥ ಕ್ಲೇಮನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಆ ಬಾಲಕನು ಬಾಲಕನಾಗಿರುವುದು ನಿಂತುಹೋಗಿದ್ದರೂ ಕೂಡ ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿತವಾದ ನಿಯಮಗಳಲ್ಲಿ ಅಡಕವಾಗಿರುವ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(2) ನ್ಯಾಯಾಲಯವು (1)ನೇ ಉಪ ಪ್ರಕರಣದ ಮೇರೆಗಿನ ಅಪರಾಧವು ಘಟಿಸಿದ ದಿನಾಂಕದಂದು ವ್ಯಕ್ತಿಯು ಬಾಲಕನಾಗಿರುವನೆಂದು ನಿರ್ಣಯಿಸಿದರೆ, ಅದು ಯುಕ್ತ ಆದೇಶ ಹೊರಡಿಸುವುದಕ್ಕಾಗಿ ಆ ಬಾಲಕನನ್ನು ಮಂಡಲಿಗೆ ಕಳುಹಿಸತಕ್ಕದ್ದು ಮತ್ತು ನ್ಯಾಯಾಲಯವು ನೀಡಿರುವ ಶಿಕ್ಷೆ ಯಾವುದಾದರೂ ಇದ್ದರೆ ಅದು ಯಾವುದೇ ಪರಿಣಾಮ ಹೊಂದಿಲ್ಲವೆಂದು ಭಾವಿಸತಕ್ಕದ್ದು.

**8. ಪರಿವೀಕ್ಷಣಾಲಯಗಳು.–** (1) ಯಾವುದೇ ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರಿಗೆ ಸಂಬಂಧಿಸಿದ ಯಾವುದೇ ವಿಚಾರಣೆಯು ಇತ್ಯರ್ಥದಲ್ಲಿರುವಾಗ ಅಂಥ ಯಾರೇ ಬಾಲಕನನ್ನು ತಾತ್ಕಾಲಿಕವಾಗಿ ಸ್ವೀಕರಿಸಲು ಪ್ರತಿಯೊಂದು ಜಿಲ್ಲೆ ಅಥವಾ ಜಿಲ್ಲೆಗಳ ಒಂದು ಸಮೂಹದಲ್ಲಿ ಅವಶ್ಯವಿರಬಹುದಾದಷ್ಟು ಪರಿವೀಕ್ಷಣಾಲಯಗಳನ್ನು ತನ್ನ ಮೂಲಕವೇ ಆಗಲಿ ಅಥವಾ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಒಪ್ಪಂದಮಾಡಿಕೊಳ್ಳುವ ಮೂಲಕವಾಗಲಿ ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ನಿರ್ವಹಿಸಲಾದ ಪರಿವೀಕ್ಷಣಾಲಯ ವಲ್ಲದ ಇತರ ಯಾವುದೇ ಸಂಸ್ಥೆಯು, ಈ ಅಧಿನಿಯಮದ ಅಡಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನಿಗೆ ಸಂಬಂಧಿಸಿದ ಯಾವುದೇ ವಿಚಾರಣೆಯು ಇತ್ಯರ್ಥದಲ್ಲಿರುವಾಗ, ಅಂಥ ಬಾಲಕನನ್ನು ತಾತ್ಕಾಲಿಕವಾಗಿ ಸ್ವೀಕರಿಸಲು ಯೋಗ್ಯವಾಗಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಈ ಅಧಿನಿಯಮದ ಉದ್ದೇಶಗಳಿಗಾಗಿ, ಅಂಥ ಸಂಸ್ಥೆಯನ್ನು ಪರಿವೀಕ್ಷಣಾಲಯವೆಂದು ಪ್ರಮಾಣೀಕರಿಸಬಹುದು.

(3) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ, ಬಾಲಕರ ಪುನರ್ವಸತಿಗಾಗಿ ಮತ್ತು ಸಾಮಾಜಿಕ ಜೀವನದಲ್ಲಿ ಅವರು ಪುನಃ ಒಂದಾಗಿ ಬೆರೆಯುವಂತೆ ಮಾಡುವುದಕ್ಕಾಗಿ ಒದಗಿಸಬೇಕಾದ ಸೇವೆಗಳ ಗುಣಮಟ್ಟಗಳನ್ನು ಮತ್ತು ವಿವಿಧ ಬಗೆಗಳನ್ನೂ ಒಳಗೊಂಡಂತೆ ಪರಿವೀಕ್ಷಣಾಲಯಗಳ ವ್ಯವಸ್ಥಾಪನೆಯ ಬಗ್ಗೆ ಮತ್ತು ಯಾವ ಪರಿಸ್ಥಿತಿಗಳಲ್ಲಿ ಮತ್ತು ಯಾವ ರೀತಿಯಲ್ಲಿ ಪರಿವೀಕ್ಷಣಾಲಯವೆಂಬುದಾಗಿ ಪ್ರಮಾಣೀಕರಿಸಬಹುದು ಅಥವಾ ಅದನ್ನು ಹಿಂತೆಗೆದುಕೊಳ್ಳಬಹುದು ಎಂಬ ಬಗ್ಗೆ ಉಪಬಂಧ ಕಲ್ಪಿಸಬಹುದು.

(4) ತಂದೆ–ತಾಯಿಯ ಅಥವಾ ಪಾಲಕನ ಹೊಣೆಗೆ ಒಪ್ಪಿಸದಿರುವ ಮತ್ತು ಪರಿವೀಕ್ಷಣಾಲಯಕ್ಕೆ ಕಳುಹಿಸಿದಂಥ ಪ್ರತಿಯೊಬ್ಬ ಬಾಲಕನನ್ನು, ಪರಿವೀಕ್ಷಣಾಲಯದಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಗೆ ಮತ್ತು ಎಸಗಿದ ಅಪರಾಧದ ಪ್ರಮಾಣಕ್ಕೆ ಯುಕ್ತ ಗಮನ ಕೊಟ್ಟು ಅವನ ವಯಸ್ಸಿಗೆ ಅಂದರೆ ಏಳರಿಂದ ಹನ್ನೆರಡು ವರ್ಷಗಳು, ಹನ್ನೆರಡರಿಂದ ಹದಿನಾರು ವರ್ಷಗಳು ಮತ್ತು ಹದಿನಾರರಿಂದ ಹದಿನೆಂಟು ವರ್ಷಗಳ ವಯೋಗುಂಪಿನ ಅನುಗುಣವಾಗಿ ಬಾಲಕನನ್ನು ಪ್ರಾರಂಭಿಕ ವಿಚಾರಣೆಗಾಗಿ, ಪಾಲನೆಗಾಗಿ ಮತ್ತು ವರ್ಗೀಕರಣವನ್ನು ಮಾಡುವುದಕ್ಕಾಗಿ ಪರಿವೀಕ್ಷಣಾಲಯದ ಸ್ವೀಕಾರ ಘಟಕದಲ್ಲಿ ಇಟ್ಟಿರತಕ್ಕದ್ದು.

**9. ವಿಶೇಷ ಗೃಹಗಳು.–** (1) ಯಾವುದೇ ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು ಸ್ವೀಕರಿಸುವುದಕ್ಕಾಗಿ ಮತ್ತು ಪುನರ್ವಸತಿ ಒದಗಿಸುವುದಕ್ಕಾಗಿ ತಾನೇ ಆಗಲಿ ಅಥವಾ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕವಾಗಲಿ ಅಗತ್ಯವಿರಬಹುದಾದಂಥ ಪ್ರತಿಯೊಂದು ಜಿಲ್ಲೆಯಲ್ಲಿ ಅಥವಾ ಜಿಲ್ಲೆಗಳ ಒಂದು ಸಮೂಹದಲ್ಲಿ ವಿಶೇಷ ಗೃಹಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ನಿರ್ವಹಿಸಲಾಗುತ್ತಿರುವ ವಿಶೇಷ ಗೃಹವಲ್ಲದ ಇತರ ಯಾವುದೇ ಸಂಸ್ಥೆಯು, ಈ ಅಧಿನಿಯಮದ ಅಡಿಯಲ್ಲಿ ಅಲ್ಲಿಗೆ ಕಳುಹಿಸಲಾಗುವ, ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರನ್ನು ಸ್ವೀಕರಿಸಲು ಯೋಗ್ಯವಾಗಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಸಂಸ್ಥೆಯನ್ನು ವಿಶೇಷ ಗೃಹವೆಂದು ಪ್ರಮಾಣೀಕರಿಸಬಹುದು.

(3) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ಬಾಲಕನನ್ನು ಪುನಃ ಸಮಾಜಜೀವಿಯನ್ನಾಗಿ ಮಾಡಲು ವಿಶೇಷ ಗೃಹಗಳು ನೀಡುವ ಸೇವೆಗಳ ಗುಣಮಟ್ಟಗಳನ್ನು ಮತ್ತು ವಿವಿಧ ಬಗೆಗಳನ್ನು ಒಳಗೊಂಡಂತೆ, ಅವುಗಳ ವ್ಯವಸ್ಥಾಪನೆಗಾಗಿ ಮತ್ತು ಯಾವ ಪರಿಸ್ಥಿತಿಗಳಲ್ಲಿ ಮತ್ತು ಯಾವ ರೀತಿಯಲ್ಲಿ ವಿಶೇಷ ಗೃಹವೆಂದು ಪ್ರಮಾಣೀಕರಿಸಬಹುದೋ ಅಥವಾ ಅದನ್ನು ಹಿಂತೆಗೆದುಕೊಳ್ಳಬಹುದೋ ಆ ಪರಿಸ್ಥಿತಿಗಳ ಮತ್ತು ರೀತಿಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಿದ ನಿಯಮಗಳಲ್ಲಿ, ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರ ವಯಸ್ಸು ಮತ್ತು ಅವರು ಮಾಡಿದ ಅಪರಾಧಗಳ ಸ್ವರೂಪ ಹಾಗೂ ಅವರ ಮಾನಸಿಕ ಮತ್ತು ದೈಹಿಕ

ಸ್ಥಿತಿಗತಿಗಳ ಆಧಾರದ ಮೇಲೆ ಅವರ ವರ್ಗೀಕರಣ ಮತ್ತು ಪ್ರತ್ಯೇಕತೆ ಇವುಗಳ ಬಗ್ಗೆಯೂ ಉಪಬಂಧ ಕಲ್ಪಿಸಬಹುದು.

**10. ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನ ಬಂಧನ.–** (1) ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು ಪೊಲೀಸರು ಬಂಧಿಸಿದ ತಕ್ಷಣ, ಅವನನ್ನು ಬಾಲಕರ ವಿಶೇಷ ಪೊಲೀಸ್ ಘಟಕದ ಅಥವಾ ನಿಯೋಜಿತ ಪೊಲೀಸ್ ಅಧಿಕಾರಿಯ ಪ್ರಭಾರದಲ್ಲಿರಿಸತಕ್ಕದ್ದು, ಅವರು ತಡಮಾಡದೆ, ಆದರೆ ಬಾಲಕನನ್ನು ಬಂಧಿಸಿದ ಸ್ಥಳದಿಂದ ಮಂಡಳಿಗೆ ಪ್ರಯಾಣ ಮಾಡಲು ಅವಶ್ಯವಿರುವ ಸಮಯವನ್ನು ಹೊರತುಪಡಿಸಿ, ಅವನನ್ನು ಬಂಧಿಸಿದ ಇಪ್ಪತ್ನಾಲ್ಕು ಗಂಟೆಗಳ ಅವಧಿಯೊಳಗಾಗಿ ಅವನನ್ನು ಮಂಡಲಿಯ ಮುಂದೆ ಹಾಜರುಪಡಿಸತಕ್ಕದ್ದು:

ಪರಂತು, ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು ಯಾವ ಸಂದರ್ಭದಲ್ಲೂ, ಪೊಲೀಸ್ ಲಾಕಪ್ಪಿನಲ್ಲಿ ಅಥವಾ ಸೆರಮನೆಯಲ್ಲಿ ಇರಿಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು,–

(i) ಕಾನೂನಿನ ಜೊತೆ ಸಂಘರ್ಷವಿರುವ ಯಾವನೇ ಬಾಲಕನನ್ನು ಯಾವ ವ್ಯಕ್ತಿಗಳ ಮೂಲಕ (ನೋಂದಾಯಿತ ಸ್ವಯಂಸೇವಾ ಸಂಸ್ಥೆಗಳೂ ಸೇರಿ) ಮಂಡಲಿಯ ಮುಂದೆ ಹಾಜರುಪಡಿಸಬಹುದೆಂಬ ಬಗ್ಗೆ ಉಪಬಂಧ ಕಲ್ಪಿಸಲು;

(ii) ಅಂಥ ಬಾಲಕನನ್ನು ಯಾವ ರೀತಿಯಲ್ಲಿ ಪರಿವೀಕ್ಷಣಾಲಯಕ್ಕೆ ಕಳುಹಿಸಬಹುದೆಂಬ ಬಗ್ಗೆ ಉಪಬಂಧ ಕಲ್ಪಿಸಲು

– ಈ ಅಧಿನಿಯಮಕ್ಕೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

**11. ಬಾಲಕನ ಮೇಲೆ ರಕ್ಷಕನ ನಿಯಂತ್ರಣ.–** ಈ ಅಧಿನಿಯಮಕ್ಕೆ ಅನುಸಾರವಾಗಿ ಬಾಲಕನನ್ನು ಯಾರ ಹೊಣೆಗೆ ಒಪ್ಪಿಸಲಾಗಿದೆಯೋ ಅಂಥ ಯಾರೇ ವ್ಯಕ್ತಿಯು, ಆದೇಶವು ಜಾರಿಯಲ್ಲಿರುವಾಗ ಅವನು ಆ ಬಾಲಕನ ತಂದೆ–ತಾಯಿಯಾಗಿದ್ದಿದ್ದರೆ ಹೇಗೋ ಹಾಗೆ ಅವನ ಮೇಲೆ ನಿಯಂತ್ರಣ ಹೊಂದಿರತಕ್ಕದ್ದು ಮತ್ತು ಅವನ ಪಾಲನೆ ಪೋಷಣೆಗೆ ಜವಾಬ್ದಾರನಾಗಿರತಕ್ಕದ್ದು ಮತ್ತು ಆ ಬಾಲಕನು ಅವನ ತಂದೆ–ತಾಯಿ ಅಥವಾ ಇತರ ಯಾರೇ ವ್ಯಕ್ತಿಯು ಕ್ಲೇಮು ಮಾಡಿದ್ದಾಗ್ಯೂ ಸಕ್ಷಮ ಪ್ರಾಧಿಕಾರವು ಹೇಳಿರುವ ಅವಧಿಯವರೆಗೆ ಅವನ ರಕ್ಷಣೆಯಲ್ಲಿಯೇ ಮುಂದುವರಿಯತಕ್ಕದ್ದು.

**12. ಬಾಲಕನಿಗೆ ಜಾಮೀನು.–** (1) ಜಾಮೀನೀಯವಾದ ಅಥವಾ ಜಾಮೀನೀಯವಲ್ಲದ ಅಪರಾಧಕ್ಕಾಗಿ ಆಪಾದಿತನಾಗಿರುವ ಯಾರೇ ವ್ಯಕ್ತಿಯು ಮತ್ತು ಅವನು ಬಾಲಕನಾಗಿರುವಾಗ ಅವನನ್ನು ಬಂಧಿಸಿರುವಾಗ ಅಥವಾ ತಡೆಹಿಡಿದಿರಿಸಿರುವಾಗ ಅಥವಾ ಅವನು ಒಂದು ಮಂಡಲಿಯ ಮುಂದೆ ಹಾಜರಾದಾಗ ಅಥವಾ ಅವನನ್ನು ಅಲ್ಲಿಗೆ ಕರೆತಂದಾಗ, ಅಂಥ ವ್ಯಕ್ತಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ 2) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಜಾಮೀನುದಾರ ಸಹಿತ ಅಥವಾ ಜಾಮೀನುದಾರನಿಲ್ಲದೆ, ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದು, ಅಥವಾ ಒಬ್ಬ ಪರಿವೀಕ್ಷಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಅಥವಾ ಯಾವುದೇ ಸೂಕ್ತ ಸಂಸ್ಥೆಯ ಅಥವಾ ಸೂಕ್ತ ವ್ಯಕ್ತಿಯ ಪಾಲನೆ ಪೋಷಣೆಯಲ್ಲಿ ಇರಿಸತಕ್ಕದ್ದು ಆದರೆ, ಹಾಗೆ ಬಿಡುಗಡೆ ಹೊಂದುವುದರಿಂದ ಅವನು ಯಾರೇ ಕುಖ್ಯಾತ ಅಪರಾಧಿಯೊಂದಿಗೆ ಜೊತೆಗೂಡುವ ಅಥವಾ ಅವನನ್ನು ನೈತಿಕ, ದೈಹಿಕ ಅಥವಾ ಮಾನಸಿಕ ಅಪಾಯಕ್ಕೆ ಒಡ್ಡುವ ಸಂಭವವಿದೆ ಎಂದು ಅಥವಾ ಅವನ ಬಿಡುಗಡೆಯು ನ್ಯಾಯೋದ್ದೇಶವನ್ನು ವಿಫಲಗೊಳಿಸುವುದೆಂದು ನಂಬಲು ಯುಕ್ತವಾದ ಕಾರಣಗಳು ಕಂಡುಬಂದರೆ ಅವನನ್ನು ಹಾಗೆ ಬಿಡುಗಡೆ ಮಾಡತಕ್ಕದ್ದಲ್ಲ.

(2) ಅಂಥ ವ್ಯಕ್ತಿಯು ದಸ್ತಗಿರಿಯಾಗಿದ್ದು ಆ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, (1)ನೇ ಉಪಪ್ರಕರಣದ ಅಡಿಯಲ್ಲಿ ಜಾಮೀನಿನ ಮೇಲೆ ಅವನನ್ನು ಬಿಡುಗಡೆ ಮಾಡದಿರುವಾಗ, ಅಂಥ ಅಧಿಕಾರಿಯು, ಅವನನ್ನು ಮಂಡಲಿಯ ಮುಂದೆ ಕರೆತರುವವರೆಗೆ ಗೊತ್ತುಪಡಿಸಿದ ರೀತಿಯಲ್ಲಿ ಪರಿವೀಕ್ಷಣಾಲಯದಲ್ಲಿ ಮಾತ್ರ ಇಡುವಂತೆ ಮಾಡತಕ್ಕದ್ದು.

(3) ಮಂಡಲಿಯು, ಅಂಥ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡದಿರುವಾಗ, ಅವನನ್ನು ಬಂದೀಖಾನೆಗೆ ಕಳುಹಿಸುವುದಕ್ಕೆ ಬದಲಾಗಿ ಅವನ ವಿಚಾರಣೆಯಾಗುವವರೆಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಪರಿವೀಕ್ಷಣಾಲಯಕ್ಕೆ ಅಥವಾ ಸುರಕ್ಷಿತ ಸ್ಥಳಕ್ಕೆ ಕಳುಹಿಸಲು ಒಂದು ಆದೇಶವನ್ನು ಮಾಡತಕ್ಕದ್ದು.

**13. ತಂದೆ –ತಾಯಿಗೆ ಅಥವಾ ಪಾಲಕನಿಗೆ ಅಥವಾ ಪರಿವೀಕ್ಷಣಾಧಿಕಾರಿಗೆ ಮಾಹಿತಿ.–** ಬಾಲಕನನ್ನು ದಸ್ತಗಿರಿ ಮಾಡಿರುವಲ್ಲಿ, ಅವನನ್ನು ಯಾವ ಪೊಲೀಸ್ ಠಾಣೆಗೆ ಅಥವಾ ವಿಶೇಷ ಬಾಲಕ ಪೊಲೀಸ್ ಘಟಕಕ್ಕೆ ಕರೆತರಲಾಗಿದೆಯೋ ಅದರ ಪ್ರಭಾರದಲ್ಲಿರುವ ಅಧಿಕಾರಿಯು, ದಸ್ತಗಿರಿ ಮಾಡಿದ ತರುವಾಯ ಆದಷ್ಟು ಬೇಗನೆ,–

(ಎ) ಆ ಬಾಲಕನ ತಂದೆ–ತಾಯಿ ಅಥವಾ ಪಾಲಕ ಲಭ್ಯವಿರುವುದು ಕಂಡುಬಂದರೆ ಅಂಥ ದಸ್ತಗಿರಿಯ ಬಗ್ಗೆ ಅವರಿಗೆ ತಿಳಿಸತಕ್ಕದ್ದು ಮತ್ತು ಆ ಬಾಲಕನು ಹಾಜರಾಗುವಂಥ ಮಂಡಲಿಯ ಮುಂದೆ ಹಾಜರಿರುವಂತೆ ಅವರಿಗೆ ನಿರ್ದೇಶಿಸತಕ್ಕದ್ದು; ಮತ್ತು

(ಬಿ) ವಿಚಾರಣೆಯನ್ನು ಮಾಡುವುದಕ್ಕೆ ಮಂಡಲಿಗೆ ಸಹಾಯವಾಗುವ ಸಂಭವವಿರುವ, ಆ ಬಾಲಕನ ಪೂರ್ವವೃತ್ತಾಂತಗಳ ಮತ್ತು ಕುಟುಂಬದ ಹಿನ್ನೆಲೆಯ ಬಗ್ಗೆ ಮತ್ತು ಇತರ ಮುಖ್ಯ ಸಂದರ್ಭಗಳ ಬಗ್ಗೆ ಮಾಹಿತಿ ಪಡೆಯಲು ಪರಿವೀಕ್ಷಣಾಧಿಕಾರಿಗೆ ಸಾಧ್ಯಮಾಡಿಕೊಡುವ ದೃಷ್ಟಿಯಿಂದ ಅಂಥ ದಸ್ತಗಿರಿಯ ಬಗ್ಗೆ ಅವನಿಗೆ ತಿಳಿಸತಕ್ಕದ್ದು.

**14. ಬಾಲಕನ ಬಗ್ಗೆ ಮಂಡಲಿಯಿಂದ ವಿಚಾರಣೆ.–** (1) ಅಪರಾಧದ ಬಗ್ಗೆ ಆರೋಪಿತನಾದ ಒಬ್ಬ ಬಾಲಕನನ್ನು ಮಂಡಲಿಯ ಮುಂದೆ ಹಾಜರುಪಡಿಸಿರುವಲ್ಲಿ, ಮಂಡಲಿಯು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಚಾರಣೆ ನಡೆಸತಕ್ಕದ್ದು ಮತ್ತು ಬಾಲಕನಿಗೆ ಸಂಬಂಧಪಟ್ಟಂತೆ ಅದು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು:

ಪರಂತು, ಮೊಕದ್ದಮೆಯ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ವಿಶೇಷ ಸಂದರ್ಭಗಳಲ್ಲಿ ಅಂಥ ವಿಸ್ತರಣೆಗಾಗಿ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ನಂತರ ಮಂಡಲಿಯು ಅಂಥ ಅವಧಿಯನ್ನು ವಿಸ್ತರಿಸಿದ ಹೊರತು, ಈ ಪ್ರಕರಣದ ಅಡಿಯಲ್ಲಿನ ವಿಚಾರಣೆಯನ್ನು ಅದರ ಪ್ರಾರಂಭದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

(2) ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮುಖ್ಯ ಮೆಟ್ರೋ ಪಾಲಿಟಿನ್ ಮ್ಯಾಜಿಸ್ಟ್ರೇಟರು, ಪ್ರತಿ ಆರು ತಿಂಗಳಿಗೊಮ್ಮೆ ಮಂಡಲಿಯಲ್ಲಿ ಇತ್ಯರ್ಥದಲ್ಲಿರುವ ಪ್ರಕರಣಗಳ ಪುನರವಲೋಕನ ಮಾಡತಕ್ಕದ್ದು ಮತ್ತು ಮಂಡಲಿಗೆ, ತನ್ನ ಉಪವೇಶನಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ನಿರ್ದೇಶಿಸತಕ್ಕದ್ದು ಅಥವಾ ಹೆಚ್ಚಿನ ಮಂಡಲಿಗಳನ್ನು ಸ್ಥಾಪಿಸುವಂತೆ ಮಾಡತಕ್ಕದ್ದು.

**15. ಬಾಲಕನ ಬಗ್ಗೆ ಮಾಡಬಹುದಾದ ಆದೇಶ.–** (1) ವಿಚಾರಣೆ ಮಾಡಿದ ಮೇಲೆ ಒಬ್ಬ ಬಾಲಕನು ಅಪರಾಧ ಮಾಡಿದ್ದಾನೆಂದು ಮಂಡಲಿಗೆ ಮನವರಿಕೆಯಾದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಅಡಕವಾಗಿದ್ದರೂ ಸಹ, ಮಂಡಲಿಯು,–

(ಎ) ಬಾಲಕನ ವಿರುದ್ಧ ಸಮುಚಿತ ವಿಚಾರಣೆ ಮಾಡಿದ ನಂತರ ಮತ್ತು ತಂದೆ–ತಾಯಿಗೆ ಅಥವಾ ಪಾಲಕರಿಗೆ ಸಲಹೆ ನೀಡಿ ಬಾಲಕನಿಗೆ ಬುದ್ಧಿವಾದ ಹೇಳಿ ಅಥವಾ ಛೀಮಾರಿ ಹಾಕಿ ಆ ಬಾಲಕನಿಗೆ ಮನೆಗೆ ಹೋಗಲು ಅನುಮತಿ ನೀಡುವುದು;

(ಬಿ) ಸಮೂಹ ಸಮಾಲೋಚನೆಯಲ್ಲಿ ಮತ್ತು ಅಂಥವೇ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಬಾಲಕನಿಗೆ ನಿರ್ದೇಶಿಸುವುದು;

(ಸಿ) ಸಮುದಾಯ ಸೇವೆಯನ್ನು ಮಾಡುವಂತೆ ಬಾಲಕನಿಗೆ ಆದೇಶಿಸುವುದು;

(ಡಿ) ಬಾಲಕನ ತಂದೆ–ತಾಯಿಗೆ ಅಥವಾ ಬಾಲಕನು ಹದಿನಾಲ್ಕು ವರ್ಷಗಳ ವಯಸ್ಸಿಗಿಂತ ಮೇಲ್ಪಟ್ಟವನಾಗಿದ್ದು ಹಣವನ್ನು ಸಂಪಾದಿಸುವಂತಿದ್ದರೆ ಅವನೇ ಜುಲ್ಮಾನೆಯನ್ನು ಸಂದಾಯ ಮಾಡುವಂತೆ ಅವನಿಗೆ ಆದೇಶಿಸುವುದು;

(ಇ) ಸನ್ನಡತೆಯ ಪರಿವೀಕ್ಷಣೆಯ ಮೇಲೆ ಬಾಲಕನನ್ನು ಬಿಡುಗಡೆ ಮಾಡಲು ಮತ್ತು ಮೂರು ವರ್ಷಗಳನ್ನು ಮೀರದ ಯಾವುದೇ ಅವಧಿಯವರೆಗೆ ಆ ಬಾಲಕನ ಒಳ್ಳೆಯ ನಡತೆ ಮತ್ತು ಕ್ಷೇಮದ ಬಗ್ಗೆ ಮಂಡಲಿಯು ಅಗತ್ಯಪಡಿಸಬಹುದಾದ ರೀತಿಯಲ್ಲಿ ಜಾಮೀನುದಾರನೊಂದಿಗೆ ಅಥವಾ ಜಾಮೀನುದಾರನಿಲ್ಲದೆ, ಯಾರೇ ತಂದೆ–ತಾಯಿಯರು, ಪಾಲಕನು ಅಥವಾ ಇತರ ಸೂಕ್ತ ವ್ಯಕ್ತಿಯು ಒಂದು ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟ ಮೇಲೆ ಅಂಥ ತಂದೆ–ತಾಯಿ, ಪಾಲಕ ಅಥವಾ ಇತರ ಸೂಕ್ತ ವ್ಯಕ್ತಿಯ ರಕ್ಷಣೆಗೆ ವಹಿಸಲು ನಿರ್ದೇಶಿಸುವುದು;

(ಎಫ್) ಸನ್ನಡತೆಯ ಪರಿವೀಕ್ಷಣೆಯ ಮೇಲೆ ಬಾಲಕನನ್ನು ಬಿಡುಗಡೆ ಮಾಡಲು ಮತ್ತು ಮೂರು ವರ್ಷಗಳನ್ನು ಮೀರದ ಯಾವುದೇ ಅವಧಿಯವರೆಗೆ ಆ ಬಾಲಕನ ಒಳ್ಳೆಯ ನಡತೆ ಮತ್ತು ಕ್ಷೇಮದ ಬಗ್ಗೆ ಯಾವುದೇ ಸೂಕ್ತ ಸಂಸ್ಥೆಯ ರಕ್ಷಣೆಗೆ ವಹಿಸಲು ನಿರ್ದೇಶಿಸುವುದು;

(ಜಿ) ಆ ಬಾಲಕನನ್ನು ಮೂರು ವರ್ಷಗಳ ಅವಧಿಗಾಗಿ ಒಂದು ವಿಶೇಷ ಗೃಹಕ್ಕೆ ಕಳುಹಿಸಲು ನಿರ್ದೇಶಿಸಿ ಆದೇಶವನ್ನು ಮಾಡುವುದು

– ಸೂಕ್ತವೆಂದು ಭಾವಿಸಿದರೆ, ಹಾಗೆ ಮಾಡಬಹುದು:

ಪರಂತು, ಮಂಡಲಿಗೆ, ಆ ಅಪರಾಧದ ಸ್ವರೂಪವನ್ನು ಮತ್ತು ಆ ಪ್ರಕರಣದ ಸನ್ನಿವೇಶಗಳನ್ನು ಗಮನಿಸಿ, ಅಂಥ ವಾಸ್ತವ್ಯದ ಅವಧಿಯನ್ನು ತಾನು ಸೂಕ್ತವೆಂದು ಯೋಚಿಸುವಂಥ ಅವಧಿಗೆ ಇಳಿಸುವುದು ವಿಹಿತವೆಂದು ಮನವರಿಕೆಯಾದರೆ, ಅದು ಕಾರಣಗಳನ್ನು ದಾಖಲ್ಮಾಡಿ ಹಾಗೆ ಮಾಡಬಹುದು.

(2) ಮಂಡಲಿಯು, ಒಬ್ಬ ಪರಿವೀಕ್ಷಣಾಧಿಕಾರಿಯ ಮೂಲಕವಾಗಲಿ ಅಥವಾ ಒಂದು ಅಂಗೀಕೃತ ಸ್ವಯಂಸೇವಾ ಸಂಸ್ಥೆಯ ಮೂಲಕವಾಗಲಿ ಅಥವಾ ಇತರ ರೀತಿಯಲ್ಲಾಗಲಿ ಬಾಲಕನಿಗೆ ಸಂಬಂಧಿಸಿದಂತೆ ಸಾಮಾಜಿಕ ತನಿಖಾ ವರದಿಯನ್ನು ಪಡೆಯತಕ್ಕದ್ದು ಮತ್ತು ಅದು ಆದೇಶ ಹೊರಡಿಸುವುದಕ್ಕೆ ಮುಂಚೆ, ಅಂಥ ವರದಿಯ ನಿರ್ಣಯಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) (1)ನೇ ಉಪಪ್ರಕರಣದ (ಡಿ) ಖಂಡದ, (ಇ) ಖಂಡದ ಅಥವಾ (ಎಫ್) ಖಂಡದ ಅಡಿಯಲ್ಲಿ ಒಂದು ಆದೇಶವನ್ನು ಮಾಡಿರುವಲ್ಲಿ, ಅದರ ಜೊತೆಗೆ ಮಂಡಲಿಯು, ಆ ಬಾಲಕನ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ, ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನು ಅಂಥ ಅವಧಿಯಲ್ಲಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಮೂರು ವರ್ಷಗಳನ್ನು ಮೀರದಂಥ ಅವಧಿಯವರೆಗೆ ಅದರಲ್ಲಿ ಹೆಸರಿಸಲಾದ ಪರಿವೀಕ್ಷಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಇರತಕ್ಕದ್ದೆಂದು ಆದೇಶವನ್ನು ಮಾಡುವುದು ವಿಹಿತವೆಂದು ಅಭಿಪ್ರಾಯಪಟ್ಟರೆ, ಹಾಗೆ ಮಾಡಬಹುದು ಮತ್ತು ಅಂಥ ಮೇಲ್ವಿಚಾರಣಾ ಆದೇಶದಲ್ಲಿ, ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನ ಯುಕ್ತ ಮೇಲ್ವಿಚಾರಣೆಗಾಗಿ ತಾನು ಅವಶ್ಯವೆಂದು ಭಾವಿಸುವಂಥ ಷರತ್ತುಗಳನ್ನು ವಿಧಿಸಬಹುದು:

ಪರಂತು, ಆ ತರುವಾಯ ಯಾವುದೇ ಕಾಲದಲ್ಲಿ ಪರಿವೀಕ್ಷಣಾಧಿಕಾರಿಯಿಂದ ಅಥವಾ ಇತರ ರೀತಿಯಲ್ಲಿ ವರದಿಯನ್ನು ಸ್ವೀಕರಿಸಿದ ಮೇಲೆ, ಮೇಲ್ವಿಚಾರಣೆಯ ಅವಧಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನು ಒಳ್ಳೆಯ ನಡತೆಯುಳ್ಳವನಾಗಿಲ್ಲವೆಂದು ಅಥವಾ ಯಾವ ಸೂಕ್ತ ಸಂಸ್ಥೆಯ ರಕ್ಷಣೆಯಲ್ಲಿ ಆ ಬಾಲಕನನ್ನು ಇಡಲಾಗಿತ್ತೋ ಆ ಸೂಕ್ತ ಸಂಸ್ಥೆಯು ಆ ಬಾಲಕನ ಒಳ್ಳೆಯ ನಡತೆ ಮತ್ತು ಕ್ಷೇಮವನ್ನು ಸುನಿಶ್ಚಿತಪಡಿಸಿಕೊಳ್ಳಲು ಇನ್ನು ಮುಂದೆ ಅದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಥವಾ ಇಚ್ಛಿಸುತ್ತಿಲ್ಲವೆಂದು ಮಂಡಲಿಗೆ ಕಂಡುಬಂದರೆ, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು ವಿಶೇಷ ಗೃಹಕ್ಕೆ ಕಳುಹಿಸುವಂತೆ ಆದೇಶಿಸಬಹುದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ಮೇಲ್ವಿಚಾರಣಾ ಆದೇಶವನ್ನು ಮಾಡುವಾಗ, ಮಂಡಲಿಯು ಸಂದರ್ಭಾನುಸಾರ ಆ ಬಾಲಕನಿಗೆ ಮತ್ತು ಅವನ ತಂದೆ-ತಾಯಿಗೆ, ಪಾಲಕನಿಗೆ ಅಥವಾ ಯಾರ ರಕ್ಷಣೆಯಲ್ಲಿ ಅವನನ್ನು ಇಡಲಾಗಿದೆಯೋ ಅಂಥ ಇತರ ಸೂಕ್ತ ವ್ಯಕ್ತಿಗೆ ಅಥವಾ ಸೂಕ್ತ ಸಂಸ್ಥೆಗೆ, ಆ ಆದೇಶದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ವಿವರಿಸತಕ್ಕದ್ದು ಮತ್ತು ತಕ್ಷಣವೇ, ಆ ಮೇಲ್ವಿಚಾರಣಾ ಆದೇಶದ ಒಂದು ಪ್ರತಿಯನ್ನು ಸಂದರ್ಭಾನುಸಾರ ಬಾಲಕನಿಗೆ, ಅವನ ತಂದೆ-ತಾಯಿಗೆ, ಪಾಲಕನಿಗೆ ಅಥವಾ ಇತರ ಸೂಕ್ತ ವ್ಯಕ್ತಿಗೆ ಅಥವಾ ಸೂಕ್ತ ಸಂಸ್ಥೆಗೆ, ಜಾಮೀನುದಾರರು ಯಾರಾದರೂ ಇದ್ದರೆ ಅವರಿಗೆ ಮತ್ತು ಪರಿವೀಕ್ಷಣಾಧಿಕಾರಿಗೆ ಒದಗಿಸತಕ್ಕದ್ದು.

**16. ಬಾಲಕನ ವಿರುದ್ಧ ಮಾಡಬಾರದಂಥ ಆದೇಶಗಳು.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಕಾನೂನಿನ ಜೊತೆ ಸಂಘರ್ಷವಿರುವ ಯಾರೇ ಬಾಲಕನು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ಅಥವಾ ಭದ್ರತೆಯನ್ನು ಒದಗಿಸಲು ತಪ್ಪಿದಲ್ಲಿ ಅವನಿಗೆ ಮರಣ ದಂಡನೆಯನ್ನು ಅಥವಾ ಆಜೀವ ಕಾರಾವಾಸ ಶಿಕ್ಷೆಗೆ ವಿಸ್ತರಿಸಬಹುದಾದ ಯಾವುದೇ ಅವಧಿಯ ಕಾರಾವಾಸವನ್ನು ವಿಧಿಸತಕ್ಕದ್ದಲ್ಲ ಅಥವಾ ಅವನನ್ನು ಬಂದೀಖಾನೆಗೆ ಕಳುಹಿಸತಕ್ಕದ್ದಲ್ಲ:

ಪರಂತು, ಹದಿನಾರು ವರ್ಷ ವಯಸ್ಸಾಗಿರುವ ಒಬ್ಬ ಬಾಲಕನು ಅಪರಾಧವನ್ನು ಮಾಡಿರುವಲ್ಲಿ, ಮತ್ತು ಅವನು ಮಾಡಿದ ಅಪರಾಧವು ಎಷ್ಟರಮಟ್ಟಿಗೆ ಗಂಭೀರ ಸ್ವರೂಪದ್ದಾಗಿದೆ ಎಂದರೆ ಅಥವಾ ಅವನ ವರ್ತನೆ ಮತ್ತು ನಡತೆ ಹೇಗಿದೆ ಎಂದರೆ ಅಂಥ ವಿಶೇಷ ಗೃಹಕ್ಕೆ ಅವನನ್ನು ಕಳುಹಿಸುವುದು ಅವನ ಹಿತದೃಷ್ಟಿಯಿಂದ ಅಥವಾ

ವಿಶೇಷ ಗೃಹದಲ್ಲಿನ ಇತರ ಬಾಲಕರ ಹಿತದೃಷ್ಟಿಯಿಂದ ಸರಿಯಲ್ಲವೆಂದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ಯಾವುದೇ ಇತರ ಕ್ರಮಗಳು ಆ ಬಗ್ಗೆ ಸೂಕ್ತವಾಗಿಲ್ಲವೆಂದು ಅಥವಾ ಸಾಕಷ್ಟು ಇಲ್ಲವೆಂದು ಮಂಡಲಿಗೆ ಮನದಟ್ಟಾದರೆ, ಮಂಡಲಿಯು ಕಾನೂನಿನ ಜೊತೆ ಸಂಘರ್ಷವಿರುವ ಆ ಬಾಲಕನನ್ನು ತಾನು ಸೂಕ್ತವೆಂದು ಯೋಚಿಸುವ ಅಂಥ ಸುರಕ್ಷಿತ ಸ್ಥಳದಲ್ಲಿ ಮತ್ತು ಅಂಥ ರೀತಿಯಲ್ಲಿ ಇಡಬೇಕೆಂದು ಆದೇಶಿಸಬಹುದು ಮತ್ತು ಈ ಪ್ರಕರಣವನ್ನು ರಾಜ್ಯ ಸರ್ಕಾರದ ಆದೇಶಕ್ಕಾಗಿ ವರದಿ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಂಡಲಿಯಿಂದ ವರದಿಯನ್ನು ಸ್ವೀಕರಿಸಿದ ಮೇಲೆ ರಾಜ್ಯ ಸರ್ಕಾರವು, ಆ ಬಾಲಕನಿಗೆ ಸಂಬಂಧಿಸಿದಂತೆ ತಾನು ಯುಕ್ತವೆಂದು ಭಾವಿಸುವಂಥ ವ್ಯವಸ್ಥೆಯನ್ನು ಮಾಡಬಹುದು ಮತ್ತು ಅಂಥ ಬಾಲಕನನ್ನು ತಾನು ಸೂಕ್ತವೆಂದು ಯೋಚಿಸುವಂಥ ಸ್ಥಳದಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ಸುರಕ್ಷಿತ ಅಭಿರಕ್ಷೆಯಲ್ಲಿರಿಸಲು ಆದೇಶಿಸಬಹುದು:

ಪರಂತು, ಹಾಗೆ ಆದೇಶಿಸಲಾದ ಅಂಥ ಸುರಕ್ಷಿತ ಅಭಿರಕ್ಷೆಯ ಅವಧಿಯು, ಯಾವುದೇ ಸಂದರ್ಭದಲ್ಲಿ ಈ ಅಧಿನಿಯಮದ 15ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದ ಗರಿಷ್ಠ ಅವಧಿಯನ್ನು ಮೀರತಕ್ಕದ್ದಲ್ಲ.

**17. ದಂಡ ಪ್ರಕ್ರಿಯಾ ಸಂಹಿತೆಯ VIIIನೇ ಅಧ್ಯಾಯದ ಅಡಿಯಲ್ಲಿನ ವ್ಯವಹರಣೆಯು ಬಾಲಕನ ವಿರುದ್ಧ ಸಕ್ಷಮವಲ್ಲ.–** ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ 2) ತದ್ವಿರುದ್ಧವಾದುದು ಏನೇ ಇದ್ದರೂ, ಸದರಿ ಸಂಹಿತೆಯ VIIIನೇ ಅಧ್ಯಾಯದ ಅಡಿಯಲ್ಲಿ ಬಾಲಕನ ವಿರುದ್ಧ ಯಾವುದೇ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಮತ್ತು ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**18. ಬಾಲಕನ ಮತ್ತು ಬಾಲಕನಲ್ಲದ ವ್ಯಕ್ತಿಯ ಬಗ್ಗೆ ಯಾವುದೇ ಜಂಟಿ ವ್ಯವಹರಣೆ ನಡೆಸದಿರುವುದು.–** (1) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 223ನೇ ಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ ಯಾವುದೇ ಅಪರಾಧಕ್ಕಾಗಿ ಯಾರೇ ಬಾಲಕನ ಮೇಲೆ, ಬಾಲಕನಲ್ಲದ ಒಬ್ಬ ವ್ಯಕ್ತಿಯೊಂದಿಗೆ ಜಂಟಿಯಾಗಿ ದೋಷಾರೋಪಣೆ ಮಾಡತಕ್ಕದ್ದಲ್ಲ ಅಥವಾ ಅವನನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

(2) ಯಾವ ಅಪರಾಧಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 223ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಬಾಲಕನು ಆಪಾದಿತನಾಗಿದ್ದರೆ ಅಂಥ ಬಾಲಕನ ಮೇಲೆ ಮತ್ತು ಬಾಲಕನಲ್ಲದ ಯಾರೇ ವ್ಯಕ್ತಿಯ ಮೇಲೆ (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ನಿಷೇಧವು ಇಲ್ಲದಿದ್ದರೆ ಹೇಗೋ ಹಾಗೆ ಆ ಅಪರಾಧಕ್ಕಾಗಿ ಒಟ್ಟಾಗಿ ದೋಷಾರೋಪಣೆ ಹೊರಿಸಿದ್ದರೆ ಮತ್ತು ಅವರನ್ನು ಒಟ್ಟಿಗೆ ಅಧಿವಿಚಾರಣೆಗೊಳಪಡಿಸಿದ್ದರೆ, ಆ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಮಂಡಳಿಯು ಬಾಲಕನ ಮತ್ತು ಇತರ ವ್ಯಕ್ತಿಯ ಅಧಿವಿಚಾರಣೆಗಳನ್ನು ಪ್ರತ್ಯೇಕವಾಗಿ ನಡೆಸುವಂತೆ ನಿರ್ದೇಶಿಸತಕ್ಕದ್ದು.

**19. ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಅನರ್ಹತೆಯನ್ನು ತೆಗೆದುಹಾಕುವುದು.–** (1) ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಅಪರಾಧವನ್ನು ಮಾಡಿರುವ ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ವ್ಯವಹರಣೆಗೆ ಒಳಗಾದ ಒಬ್ಬ ಬಾಲಕನು, ಅಂಥ ಕಾನೂನಿನ ಅಡಿಯಲ್ಲಿ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಅಂಥ ಅನರ್ಹತೆ ಯಾವುದಾದರೂ ಇದ್ದರೆ ಅದಕ್ಕೆ ಒಳಗಾಗತಕ್ಕದ್ದಲ್ಲ.

(2) ಮಂಡಲಿಯು, ಅಂಥ ಅಪರಾಧ ನಿರ್ಣಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಅಪೀಲಿನ ಅವಧಿಯು ಮುಕ್ತಾಯವಾದ ಅಥವಾ ಸಂದರ್ಭಾನುಸಾರ, ನಿಯಮಗಳ ಅಡಿಯಲ್ಲಿ ಗೊತ್ತುಪಡಿಸಿದ ಯುಕ್ತ ಅವಧಿಯು ಮುಕ್ತಾಯವಾದ ನಂತರ ತೆಗೆದುಹಾಕತಕ್ಕದ್ದೆಂದು ನಿರ್ದೇಶಿಸಿ ಆದೇಶ ಮಾಡತಕ್ಕದ್ದು.

**20. ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ.–** ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದರೂ, ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬರುವಂಥ ದಿನಾಂಕದಂದು ಆ ಪ್ರದೇಶದಲ್ಲಿನ ಯಾವುದೇ ನ್ಯಾಯಾಲಯದಲ್ಲಿ ಬಾಲಕನಿಗೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳನ್ನು, ಈ ಅಧಿನಿಯಮವನ್ನು ಮಾಡಿರದಿದ್ದರೆ ಹೇಗೋ ಹಾಗೆ ಆ ನ್ಯಾಯಾಲಯದಲ್ಲಿ ಮುಂದುವರಿಸತಕ್ಕದ್ದು ಮತ್ತು ಆ ನ್ಯಾಯಾಲಯವು ಆ ಬಾಲಕನು ಅಪರಾಧವನ್ನು ಮಾಡಿದ್ದಾನೆಂದು ನಿರ್ಣಯಿಸಿದರೆ, ಅದು ಅಂಥ ನಿರ್ಣಯವನ್ನು ದಾಖಲಿಸತಕ್ಕದ್ದು ಮತ್ತು ಆ ಬಾಲಕನಿಗೆ ಸಂಬಂಧಿಸಿದಂತೆ ಯಾವುದೇ ಶಿಕ್ಷೆಯನ್ನು ವಿಧಿಸುವ ಬದಲು ಆ ಬಾಲಕನನ್ನು ಮಂಡಲಿಗೆ ಕಳುಹಿಸತಕ್ಕದ್ದು, ಅದು, ಈ ಅಧಿನಿಯಮದ ಅಡಿಯಲ್ಲಿ ವಿಚಾರಣೆಯನ್ನು ಮಾಡಿದ ಮೇಲೆ ಆ ಬಾಲಕನು ಆ ಅಪರಾಧವನ್ನು ಮಾಡಿದ್ದಾನೆಂದು

ಅದಕ್ಕೆ ಮನದಟ್ಟಾಗಿದ್ದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ, ಆ ಬಾಲಕನಿಗೆ ಸಂಬಂಧಿಸಿದಂತೆ ಆದೇಶಗಳನ್ನು ಮಾಡತಕ್ಕದ್ದು:

ಪರಂತು, ಮಂಡಲಿಯು, ಅಂಥ ಬಾಲಕನ ಹಿತದೃಷ್ಟಿಯಿಂದ, ಆದೇಶದಲ್ಲಿ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ನಮೂದಿಸಿ ಆ ಪ್ರಕರಣವನ್ನು ಪುನರವಲೋಕಿಸಿ ಯುಕ್ತ ಆದೇಶವನ್ನು ಮಾಡಬಹುದು.

**ವಿವರಣೆ.–** ಕಾನೂನಿನ ಜೊತೆ ಸಂಘರ್ಷವಿರುವ ಒಬ್ಬ ಬಾಲಕನಿಗೆ ಸಂಬಂಧಿಸಿದಂತೆ, ಯಾವುದೇ ನ್ಯಾಯಾಲಯದಲ್ಲಿ, ಅಧಿವಿಚಾರಣೆ, ಪುನರೀಕ್ಷಣೆ, ಅಪೀಲು ಅಥವಾ ಇತರ ಯಾವುದೇ ಕ್ರಿಮಿನಲ್ ವ್ಯವಹರಣೆಗಳೂ ಸೇರಿದಂತೆ, ಇತ್ಯರ್ಥದಲ್ಲಿರುವ ಎಲ್ಲ ಪ್ರಕರಣಗಳಲ್ಲಿ ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಆ ಬಾಲಕನು ಬಾಲಕನಾಗಿರುವುದು ನಿಂತು ಹೋಗಿದ್ದರೂ ಕೂಡ, 2ನೇ ಪ್ರಕರಣದ (1)ನೇ ಖಂಡಕ್ಕನುಸಾರವಾಗಿ ಆ ಬಾಲಕನ ಬಾಲಕತ್ವವನ್ನು ನಿರ್ಧರಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಆಪಾದಿಸಲಾದ ಅಪರಾಧಗಳು ನಡೆದಾಗ ಎಲ್ಲ ಉದ್ದೇಶಗಳಿಗೆ ಮತ್ತು ಎಲ್ಲ ನಿರ್ದಿಷ್ಟ ಕಾಲದಲ್ಲಿ ಸದರಿ ಉಪಬಂಧಗಳು ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**21 ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಯಲ್ಲಿ ಒಳಗೊಂಡ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನ ಅಥವಾ ಪಾಲನೆ ಮತ್ತು ರಕ್ಷಣೆ ಅಗತ್ಯತೆಯಿರುವ ಮಗುವಿನ ಹೆಸರು, ಇತ್ಯಾದಿಯ ಪ್ರಕಟಣೆಗೆ ನಿಷೇಧ.–** (1) ಯಾವುದೇ ವೃತ್ತ ಪತ್ರಿಕೆಯಲ್ಲಿ, ಮ್ಯಾಗಜಿನ್‌ನಲ್ಲಿ, ಸುದ್ದಿ ಪತ್ರಿಕೆಯಲ್ಲಿ ಅಥವಾ ದೃಶ್ಯ ಮಾಧ್ಯಮದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನಿಗೆ ಅಥವಾ ಪಾಲನೆ ಮತ್ತು ರಕ್ಷಣೆ ಅಗತ್ಯತೆಯಿರುವ ಮಗುವಿಗೆ ಸಂಬಂಧಿಸಿದ ಯಾವುದೇ ವಿಚಾರಣೆಯ ಯಾವುದೇ ವರದಿಯು, ಆ ಬಾಲಕನನ್ನು ಅಥವಾ ಆ ಮಗುವನ್ನು ಗುರುತಿಸಲು ಅನುವು ಮಾಡಿಕೊಡಲು ಕಾರಣವಾಗುವ ಅವನ ಹೆಸರು, ವಿಳಾಸ ಅಥವಾ ಶಾಲೆ ಅಥವಾ ಯಾವುದೇ ಇತರ ವಿವರಗಳನ್ನು ಬಹಿರಂಗ ಪಡಿಸತಕ್ಕದ್ದಲ್ಲ ಅಥವಾ ಅಂಥ ಯಾವನೇ ಪಾಲಕನ ಅಥವಾ ಮಗುವಿನ ಯಾವುದೇ ಚಿತ್ರವನ್ನು ಪ್ರಕಟಿಸತಕ್ಕದ್ದಲ್ಲ:

ಪರಂತು, ವಿಚಾರಣೆಯನ್ನು ನಡೆಸುತ್ತಿರುವ ಪ್ರಾಧಿಕಾರವು, ಆ ಬಾಲಕನ ಅಥವಾ ಆ ಮಗುವಿನ ಹಿತದೃಷ್ಟಿಯಿಂದ, ಕಾರಣಗಳನ್ನು ಬರಹದಲ್ಲಿ ದಾಖಲಿಸಿ, ಹಾಗೆ ಬಹಿರಂಗಪಡಿಸುವುದು ಯೋಗ್ಯವೆಂದು ಅಭಿಪ್ರಾಯಪಟ್ಟರೆ, ಹಾಗೆ ಬಹಿರಂಗಪಡಿಸಲು ಅನುಮತಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**22. ತಪ್ಪಿಸಿಕೊಂಡ ಬಾಲಕನಿಗೆ ಸಂಬಂಧಿಸಿದಂತೆ ಉಪಬಂಧ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಯಾರೇ ಪೊಲೀಸ್ ಅಧಿಕಾರಿಯು ವಿಶೇಷ ಗೃಹದಿಂದ ಅಥವಾ ಪರಿವೀಕ್ಷಣಾಲಯದಿಂದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅವನನ್ನು ಇರಿಸಲಾಗಿರುವ ಒಬ್ಬ ವ್ಯಕ್ತಿಯ ರಕ್ಷಣೆಯಿಂದ ತಪ್ಪಿಸಿಕೊಂಡಿರುವ ಬಾಲಕನನ್ನು ವಾರಂಟಿಲ್ಲದೆ ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಆ ಬಾಲಕನನ್ನು ಆ ವಿಶೇಷ ಗೃಹಕ್ಕೆ ಅಥವಾ ಪರಿವೀಕ್ಷಣಾಲಯಕ್ಕೆ ಅಥವಾ ಸಂದರ್ಭಾನುಸಾರ ಆ ವ್ಯಕ್ತಿಯ ಬಳಿಗೆ ವಾಪಸ್ಸು ಕಳುಹಿಸಬಹುದು; ಮತ್ತು ಹಾಗೆ ತಪ್ಪಿಸಿಕೊಂಡ ಕಾರಣಕ್ಕಾಗಿ ಆ ಬಾಲಕನಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ, ಆದರೆ, ಆ ವಿಶೇಷ ಗೃಹವು ಅಥವಾ ಪರಿವೀಕ್ಷಣಾಲಯವು ಅಥವಾ ಆ ವ್ಯಕ್ತಿಯು ಆ ಬಾಲಕನಿಗೆ ಸಂಬಂಧಿಸಿದಂತೆ ಆದೇಶವನ್ನು ಮಾಡಿರುವ ಮಂಡಲಿಗೆ ಮಾಹಿತಿಯನ್ನು ಕೊಟ್ಟ ತರುವಾಯ, ಆ ಬಾಲಕನ ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅವಶ್ಯವೆಂದು ಭಾವಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

**23. ಬಾಲಕನ ಅಥವಾ ಮಗುವಿನ ಮೇಲಿನ ಕ್ರೌರ್ಯಕ್ಕಾಗಿ ಶಿಕ್ಷೆ.–** ಬಾಲಕನ ಅಥವಾ ಮಗುವಿನ ವಾಸ್ತವಿಕ ಹೊಣೆಗಾರಿಕೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಯಾರೇ ಆಗಲಿ, ಆ ಬಾಲಕನಿಗೆ ಅಥವಾ ಮಗುವಿಗೆ ಅನಾವಶ್ಯಕ ಮಾನಸಿಕ ಅಥವಾ ದೈಹಿಕ ನೋವನ್ನುಂಟುಮಾಡುವ ಸಂಭವವಿರುವ ರೀತಿಯಲ್ಲಿ ಅಂಥ ಬಾಲಕನ ಅಥವಾ ಮಗುವಿನ ಮೇಲೆ ಹಲ್ಲೆ ಮಾಡಿದರೆ, ಪರಿತ್ಯಜಿಸಿದರೆ, ರಕ್ಷಣೆ ಕೊಡದಿದ್ದರೆ ಅಥವಾ ಬಾಲಕನನ್ನು ಉದ್ದೇಶಪೂರ್ವಕವಾಗಿ ಉಪೇಕ್ಷಿಸಿದರೆ ಅಥವಾ ಹಲ್ಲೆಗೊಳಗಾಗುವಂತೆ, ಪರಿತ್ಯಜಿಸುವಂತೆ, ರಕ್ಷಣೆ ಕೊಡದಂತೆ ಅಥವಾ ಉಪೇಕ್ಷಿಸುವಂತೆ ಮಾಡಿದರೆ ಅಥವಾ ಹಲ್ಲೆಮಾಡಲು, ಪರಿತ್ಯಜಿಸಲು ಅಥವಾ ರಕ್ಷಣೆ ಕೊಡದಿರಲು ಅಥವಾ ಉಪೇಕ್ಷಿಸಲು ಅವನನ್ನು ವಶಕ್ಕೆ ತೆಗೆದುಕೊಂಡರೆ ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**24. ಬಾಲಕನನ್ನು ಅಥವಾ ಮಗುವನ್ನು ಭಿಕ್ಷೆ ಬೇಡುವುದಕ್ಕಾಗಿ ತೊಡಗಿಸುವುದು.–** (1) ಯಾರೇ ಆಗಲಿ, ಯಾರೇ ಬಾಲಕ ಅಥವಾ ಯಾವುದೇ ಮಗುವನ್ನು ಭಿಕ್ಷೆ ಬೇಡುವ ಉದ್ದೇಶಗಳಿಗಾಗಿ ತೊಡಗಿಸಿಕೊಂಡರೆ ಅಥವಾ ಉಪಯೋಗಿಸಿಕೊಂಡರೆ ಅಥವಾ ಯಾರೇ ಬಾಲಕನನ್ನು ಭಿಕ್ಷೆ ಬೇಡುವಂತೆ ಮಾಡಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(2) ಬಾಲಕನ ವಾಸ್ತವಿಕ ಹೊಣೆ ಅಥವಾ ನಿಯಂತ್ರಣ ಹೊಂದಿರುವ ಯಾರೇ ಆಗಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡುವಂತೆ ದುಷ್ಪ್ರೇರಿಸಿದರೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**25. ಬಾಲಕನಿಗೆ ಅಥವಾ ಮಗುವಿಗೆ ಮತ್ತುಬರಿಸುವ ಮದ್ಯವನ್ನು ಅಥವಾ ನಿದ್ರಾಜನಕ ಔಷಧವನ್ನು ಅಥವಾ ಮನೋದ್ರೇಕಕಾರಿ ವಸ್ತುವನ್ನು ಕೊಟ್ಟಿದ್ದಕ್ಕಾಗಿ ದಂಡನೆ.–** ಯಾರೇ ಆಗಲಿ, ಯಾರೇ ಬಾಲಕನಿಗೆ ಅಥವಾ ಯಾವುದೇ ಮಗುವಿಗೆ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮತ್ತುಬರಿಸುವ ಮದ್ಯವನ್ನು ಅಥವಾ ಯುಕ್ತವಾದ ಅರ್ಹತೆಯುಳ್ಳ ವೈದ್ಯಕೀಯ ವೃತ್ತಿಗನ ಆದೇಶದ ಅಥವಾ ಕಾಯಿಲೆಯ ಸಂದರ್ಭದ ಹೊರತು, ಯಾವುದೇ ನಿದ್ರಾಜನಕ ಔಷಧವನ್ನು ಅಥವಾ ಮನೋದ್ರೇಕಕಾರಿ ವಸ್ತುವನ್ನು ಕೊಟ್ಟರೆ ಅಥವಾ ಕೊಡುವಂತೆ ಮಾಡಿದರೆ, ಅವನು ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**26. ಕೆಲಸದಲ್ಲಿರುವ ಬಾಲಕನ ಅಥವಾ ಮಗುವಿನ ಶೋಷಣೆ.–** ಯಾರೇ ಆಗಲಿ, ನಿಜಸಂಗತಿಯನ್ನು ಮರೆಮಾಚಿ ಬಾಲಕನನ್ನು ಅಥವಾ ಮಗುವನ್ನು ನೇಮಿಸಿಕೊಂಡು ಯಾವುದೇ ಅಪಾಯಕಾರಿ ಕೆಲಸದ ಉದ್ದೇಶಕ್ಕಾಗಿ, ಜೀತಕ್ಕಾಗಿ ಇರಿಸಿಕೊಂಡರೆ ಮತ್ತು ಅವನ ಅಥವಾ ಅದರ ಸಂಪಾದನೆಯನ್ನು ಕೊಡದಿದ್ದರೆ ಅಥವಾ ಅಂಥ ಸಂಪಾದನೆಯನ್ನು ತನ್ನ ಸ್ವಂತ ಉದ್ದೇಶಗಳಿಗಾಗಿ ಬಳಸಿಕೊಂಡರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**27. ವಿಶೇಷ ಅಪರಾಧಗಳು.–** 23, 24, 25 ಮತ್ತು 26ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

**28. ಪರ್ಯಾಯ ದಂಡನೆ.–** ಒಂದು ಕೃತ್ಯವು ಅಥವಾ ಲೋಪವು, ಈ ಅಧಿನಿಯಮದ ಅಡಿಯಲ್ಲಿ ಮತ್ತು ಇತರ ಯಾವುದೇ ಕೇಂದ್ರ ಅಥವಾ ರಾಜ್ಯ ಅಧಿನಿಯಮದ ಅಡಿಯಲ್ಲಿ ಸಹ ದಂಡನೀಯ ಅಪರಾಧವಾಗಿರುವಲ್ಲಿ, ಆಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಅಂಥ ಅಪರಾಧಗಳ ತಪ್ಪಿತಸ್ಥನೆಂದು ಕಂಡುಬಂದ ಅಪರಾಧಿಯು, ಹೆಚ್ಚಿನ ಪ್ರಮಾಣದ ದಂಡನೆಯನ್ನು ಉಪಬಂಧಿಸಿರುವಂಥ ಅಧಿನಿಯಮದ ಅಡಿಯಲ್ಲಿ ಮಾತ್ರ ದಂಡನೆಗೆ ಗುರಿಯಾಗತಕ್ಕದ್ದು.

## ಅಧ್ಯಾಯ – III

## ಪಾಲನೆ ಮತ್ತು ರಕ್ಷಣೆಯ ಅಗತ್ಯತೆಯಿರುವ ಮಗು

**29. ಶಿಶು ಕಲ್ಯಾಣ ಸಮಿತಿ.–** (1) ರಾಜ್ಯ ಸರ್ಕಾರವು, ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಗುವಿಗೆ ಸಂಬಂಧಪಟ್ಟಂತೆ ಅಂಥ ಸಮಿತಿಗಳಿಗೆ ಈ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಅಧಿನಿಯಮ, 2006ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ ಪ್ರತಿಯೊಂದು ಜಿಲ್ಲೆಗಾಗಿ ಒಂದು ಅಥವಾ ಹೆಚ್ಚು ಶಿಶು ಕಲ್ಯಾಣ ಸಮಿತಿಗಳನ್ನು ರಚಿಸಬಹುದು.

(2) ಸಮಿತಿಯು, ರಾಜ್ಯ ಸರ್ಕಾರವು ನೇಮಕ ಮಾಡಲು ಸೂಕ್ತವೆಂದು ಯೋಚಿಸುವಂಥ ಒಬ್ಬ ಅಧ್ಯಕ್ಷನನ್ನು ಮತ್ತು ಇತರ ನಾಲ್ವರು ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಅವರಲ್ಲಿ ಕನಿಷ್ಠಪಕ್ಷ ಒಬ್ಬರು ಮಹಿಳೆಯಾಗಿರತಕ್ಕದ್ದು ಮತ್ತು ಮತ್ತೊಬ್ಬರು ಮಕ್ಕಳಿಗೆ ಸಂಬಂಧಪಟ್ಟಂಥ ವಿಷಯಗಳಲ್ಲಿ ಪರಿಣಿತರಾಗಿರತಕ್ಕದ್ದು.

(3) ಅಧ್ಯಕ್ಷನ ಮತ್ತು ಸದಸ್ಯರ ಅರ್ಹತೆಗಳು, ಮತ್ತು ಅವರನ್ನು ನೇಮಿಸಬಹುದಾದ ಅವಧಿಯು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(4) ಸಮಿತಿಯ ಯಾರೇ ಸದಸ್ಯನ ನೇಮಕವನ್ನು, ರಾಜ್ಯ ಸರ್ಕಾರವು ವಿಚಾರಣೆ ನಡೆಸಿದ ನಂತರ,–

(i) ಅವನು ಈ ಅಧಿನಿಯಮದ ಅಡಿಯಲ್ಲಿ ನಿಹಿತವಾದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ತಪ್ಪಿತಸ್ಥನೆಂದು ಕಂಡುಬಂದರೆ;

(ii) ಅವನು, ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಅಂಥ ಅಪರಾಧ ನಿರ್ಣಯವನ್ನು ವಿಪರ್ಯಯಗೊಳಿಸಿಲ್ಲದಿದ್ದರೆ ಅಥವಾ ಅಂಥ ಅಪರಾಧದ ಸಂಬಂಧದಲ್ಲಿ ಅವನಿಗೆ ಪೂರ್ಣ ಕ್ಷಮೆ ನೀಡಿರದಿದ್ದರೆ;

(iii) ಅವನು, ಯಾವುದೇ ಸೂಕ್ತ ಕಾರಣವಿಲ್ಲದೆ ನಿರಂತರವಾಗಿ ಮೂರು ತಿಂಗಳು ಸಮಿತಿಯ ವ್ಯವಹರಣೆಗಳಿಗೆ ಹಾಜರಾಗಲು ತಪ್ಪಿದರೆ ಅಥವಾ ವರ್ಷದಲ್ಲಿ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆ ಸಭೆಗಳಿಗೆ ಹಾಜರಾಗಲು ತಪ್ಪಿದರೆ

– ಕೊನೆಗೊಳಿಸಬಹುದು.

(5) ಸಮಿತಿಯು ಮ್ಯಾಜಿಸ್ಟ್ರೇಟರ ಒಂದು ನ್ಯಾಯಪೀಠದಂತೆ ಕಾರ್ಯನಿರ್ವಹಿಸತಕ್ಕದ್ದು ಮತ್ತು ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಸಂದರ್ಭಾನುಸಾರ, ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಅದು ಹೊಂದಿರತಕ್ಕದ್ದು.

**30. ಸಮಿತಿಗೆ ಸಂಬಂಧಿಸಿದ ಕಾರ್ಯವಿಧಾನ, ಇತ್ಯಾದಿ.–** (1) ಸಮಿತಿಯು ಗೊತ್ತುಪಡಿಸಬಹುದಾದ ಅಂಥ ಕಾಲದಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಸಂಬಂಧದಲ್ಲಿ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಸಮಿತಿಯು ಸಭೆ ಸೇರದಿದ್ದಾಗ, ಪಾಲನೆಯ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಗುವನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಅಥವಾ ಇತರೆ ರೀತಿಯಲ್ಲಿ ಇರಿಸುವುದಕ್ಕಾಗಿ ಯಾರೇ ಒಬ್ಬ ಸದಸ್ಯನ ಮುಂದೆ ಹಾಜರುಪಡಿಸಬಹುದು.

(3) ಯಾವುದೇ ಮಧ್ಯಂತರ ತೀರ್ಮಾನದ ಸಂದರ್ಭದಲ್ಲಿ ಸಮಿತಿಯ ಸದಸ್ಯರೊಳಗೆ ಯಾವುದೇ ಭಿನ್ನಾಭಿಪ್ರಾಯವಿರುವಲ್ಲಿ, ಬಹುಮತದ ಅಭಿಪ್ರಾಯವು ನಿರ್ಣಾಯಕವಾಗಿರತಕ್ಕದ್ದು. ಆದರೆ, ಅಂಥ ಬಹುಮತವಿಲ್ಲದಿರುವಲ್ಲಿ, ಅಧ್ಯಕ್ಷನ ಅಭಿಪ್ರಾಯವು ನಿರ್ಣಾಯಕವಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾರೇ ಸದಸ್ಯನು ಗೈರು ಹಾಜರಿದ್ದಾಗ್ಯೂ ಸಮಿತಿಯು ಕಾರ್ಯನಿರ್ವಹಿಸಬಹುದು ಮತ್ತು ಸಮಿತಿಯು ಮಾಡಿದ ಯಾವುದೇ ಆದೇಶವು, ವ್ಯವಹರಣೆಯ ಯಾವುದೇ ಹಂತದಲ್ಲಿ, ಯಾರೇ ಸದಸ್ಯನ ಗೈರು ಹಾಜರಿಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**31. ಸಮಿತಿಯ ಅಧಿಕಾರಗಳು.–** (1) ಸಮಿತಿಯು, ಮಕ್ಕಳ ಪಾಲನೆ, ರಕ್ಷಣೆ, ಉಪಚಾರ, ಅಭಿವೃದ್ಧಿ ಮತ್ತು ಪುನರ್ವಸತಿಗೆ ಸಂಬಂಧಿಸಿದ ಹಾಗೂ ಮೂಲಭೂತ ಅಗತ್ಯತೆಗಳನ್ನೊದಗಿಸುವ ಮತ್ತು ಮಾನವ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳನ್ನು ವಿಲೆ ಮಾಡುವ ಅಂತಿಮ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಯಾವುದೇ ಪ್ರದೇಶಕ್ಕಾಗಿ ಒಂದು ಸಮಿತಿಯನ್ನು ರಚಿಸಿರುವಲ್ಲಿ, ಅಂಥ ಸಮಿತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಸಹ, ಆದರೆ, ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನು ಉಳಿದು, ಪಾಲನೆಯ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಅಡಿಯಲ್ಲಿ ಎಲ್ಲಾ ವ್ಯವಹರಣೆಗಳ ಬಗ್ಗೆ ಮಾತ್ರವೇ ವ್ಯವಹರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**32. ಸಮಿತಿಯ ಮುಂದೆ ಹಾಜರುಪಡಿಸುವುದು.–** (1) ಪಾಲನೆ ಅಥವಾ ರಕ್ಷಣೆಯ ಅವಶ್ಯಕತೆ ಇರುವ ಯಾವುದೇ ಮಗುವನ್ನು ಈ ಮುಂದಿನ ವ್ಯಕ್ತಿಗಳಲ್ಲಿ ಯಾರೇ ಒಬ್ಬರು ಸಮಿತಿಯ ಮುಂದೆ ಹಾಜರುಪಡಿಸಬಹುದು,–

(i) ಯಾರೇ ಪೊಲೀಸ್ ಅಧಿಕಾರಿ ಅಥವಾ ವಿಶೇಷ ಬಾಲಕ ಪೊಲೀಸ್ ಘಟಕ ಅಥವಾ ನಿಯೋಜಿತ ಪೊಲೀಸ್ ಅಧಿಕಾರಿ;

(ii) ಯಾರೇ ಲೋಕ ನೌಕರ;

(iii) ಮಕ್ಕಳ ಸಹಾಯವಾಣಿ, ನೋಂದಾಯಿತ ಸ್ವಯಂಸೇವಾ ಸಂಸ್ಥೆ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆಯಬಹುದಾದ ಅಂಥ ಇತರೆ ಸ್ವಯಂಸೇವಾ ಸಂಸ್ಥೆ ಅಥವಾ ಒಂದು ಏಜೆನ್ಸಿ;

(iv) ಯಾರೇ ಸಮಾಜ ಕಾರ್ಯಕರ್ತ ಅಥವಾ ಒಬ್ಬ ಸಾರ್ವಜನಿಕ ಕಳಕಳಿಯುಳ್ಳ ನಾಗರಿಕ; ಅಥವಾ

(v) ಆ ಮಗು ತಾನೇ ಹಾಜರಾಗಬಹುದು:

ಪರಂತು, ಯಾವುದೇ ಕಾಲ ವಿಳಂಬ ಮಾಡದೆ, ಪ್ರಯಾಣಕ್ಕೆ ಅವಶ್ಯಕವಾದ ಸಮಯವನ್ನು ಹೊರತುಪಡಿಸಿ ಇಪ್ಪತ್ನಾಲ್ಕು ಗಂಟೆಗಳ ಅವಧಿಯೊಳಗಾಗಿ ಸಮಿತಿಯ ಮುಂದೆ ಆ ಮಗುವನ್ನು ಹಾಜರುಪಡಿಸತಕ್ಕದ್ದು.

(2) ವಿಚಾರಣೆಯು ಇತ್ಯರ್ಥದಲ್ಲಿರುವಾಗ ಸಮಿತಿಗೆ ವರದಿ ಮಾಡುವ ವಿಧಾನಕ್ಕಾಗಿ ಮತ್ತು ಮಗುವನ್ನು ಮಕ್ಕಳ ಗೃಹಕ್ಕೆ ಕಳುಹಿಸುವ ಮತ್ತು ಅದರ ವಶಕ್ಕೆ ಒಪ್ಪಿಸಿಕೊಡುವ ವಿಧಾನಕ್ಕಾಗಿ ಉಪಬಂಧ ಕಲ್ಪಿಸಲು ರಾಜ್ಯ ಸರ್ಕಾರವು ಈ ಅಧಿನಿಯಮಕ್ಕೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

**33. ವಿಚಾರಣೆ.–** (1) 32ನೇ ಪ್ರಕರಣದ ಅಡಿಯಲ್ಲಿ ವರದಿಯನ್ನು ಸ್ವೀಕರಿಸಿದ ಮೇಲೆ, ಸಮಿತಿಯು ಗೊತ್ತುಪಡಿಸಿದ ರೀತಿಯಲ್ಲಿ ವಿಚಾರಣೆ ನಡೆಸತಕ್ಕದ್ದು ಮತ್ತು ಸಮಿತಿಯು ಸ್ವತಃ ತಾನಾಗಿಯೇ ಅಥವಾ 32ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಹೇಳಿರುವಂತೆ ಯಾರೇ ವ್ಯಕ್ತಿಯಿಂದ ಅಥವಾ ಏಜೆನ್ಸಿಯಿಂದ ವರದಿ ಬಂದ ಮೇಲೆ ಸಮಾಜ ಕಾರ್ಯಕರ್ತನ ಅಥವಾ ಮಕ್ಕಳ ಕಲ್ಯಾಣ ಅಧಿಕಾರಿಯ ಮೂಲಕ ಶೀಘ್ರ ವಿಚಾರಣೆ ನಡೆಸುವ ಸಲುವಾಗಿ ಆ ಮಗುವನ್ನು ಮಕ್ಕಳ ಗೃಹಕ್ಕೆ ಕಳುಹಿಸುವಂತೆ ಆದೇಶ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿನ ವಿಚಾರಣೆಯನ್ನು, ಆದೇಶವನ್ನು ಸ್ವೀಕರಿಸಿದ ನಾಲ್ಕು ತಿಂಗಳೊಳಗಾಗಿ ಅಥವಾ ಸಮಿತಿಯು ನಿಗದಿಪಡಿಸಬಹುದಾದ ಅಂಥ ಕಡಿಮೆ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು:

ಪರಂತು, ಸಮಿತಿಯು ಪ್ರಕರಣದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ವಿಚಾರಣಾ ವರದಿಯನ್ನು ಸಲ್ಲಿಸಬೇಕಾದ ಕಾಲವನ್ನು ಸಮಿತಿಯು ನಿರ್ಣಯಿಸಬಹುದಾದಂಥ ಅವಧಿಯವರೆಗೆ ವಿಸ್ತರಿಸಬಹುದು.

(3) ರಾಜ್ಯ ಸರ್ಕಾರವು, ಪ್ರತಿ ಆರು ತಿಂಗಳಿಗೊಮ್ಮೆ ಇತ್ಯರ್ಥದಲ್ಲಿರುವ ಪ್ರಕರಣಗಳನ್ನು ಪುನರವಲೋಕಿಸತಕ್ಕದ್ದು, ಮತ್ತು ಸಮಿತಿಗಳ ಉಪವೇಶನಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ನಿರ್ದೇಶಿಸತಕ್ಕದ್ದು ಅಥವಾ ಹೆಚ್ಚಿನ ಸಮಿತಿಗಳನ್ನು ರಚಿಸುವಂತೆ ಮಾಡಬಹುದು.

(4) ವಿಚಾರಣೆಯು ಪೂರ್ಣಗೊಂಡ ನಂತರ, ಸದರಿ ಮಗುವಿಗೆ ಯಾವುದೇ ಕುಟುಂಬ ಇಲ್ಲವೆಂದು ಅಥವಾ ಹೇಳಿಕೊಳ್ಳುವಂಥ ಬೆಂಬಲವಿಲ್ಲವೆಂದು ಅಥವಾ ಅದಕ್ಕೆ ನಿರಂತರವಾಗಿ ಪಾಲನೆ ಮತ್ತು ರಕ್ಷಣೆಯ ಅಗತ್ಯತೆ ಇದೆಯೆಂದು ಸಮಿತಿಯು ಅಭಿಪ್ರಾಯಪಟ್ಟರೆ, ಅದಕ್ಕೆ ಸೂಕ್ತ ಪುನರ್ವಸತಿ ಲಭ್ಯವಾಗುವವರೆಗೆ ಅಥವಾ ಹದಿನೆಂಟು ವರ್ಷ ವಯಸ್ಸು ಆಗುವವರೆಗೆ, ಆ ಮಗುವನ್ನು ಮಕ್ಕಳ ಗೃಹದಲ್ಲಿ ಅಥವಾ ಆಶ್ರಯ ಗೃಹದಲ್ಲಿ ಉಳಿದುಕೊಳ್ಳಲು ಅದು ಅವಕಾಶ ಮಾಡಿಕೊಡಬಹುದು.

**34. ಮಕ್ಕಳ ಗೃಹಗಳು.–** (1) ರಾಜ್ಯ ಸರ್ಕಾರವು, ಮಕ್ಕಳ ವಿಚಾರಣೆಯು ಇತ್ಯರ್ಥದಲ್ಲಿರುವ ಕಾಲದಲ್ಲಿ ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಗುವನ್ನು ಸ್ವೀಕರಿಸುವುದಕ್ಕಾಗಿ ಮತ್ತು ಆ ತರುವಾಯ ಅವರ ಪಾಲನೆ, ಶುಶ್ರೂಷೆ, ಶಿಕ್ಷಣ, ತರಬೇತಿ, ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ ಪ್ರತಿಯೊಂದು ಜಿಲ್ಲೆ ಅಥವಾ ಸಂದರ್ಭಾನುಸಾರ, ಜಿಲ್ಲೆಗಳ ಸಮೂಹಗಳಲ್ಲಿ ಸ್ವತಃ ಆಗಲಿ ಅಥವಾ ಸ್ವಯಂ ಸೇವಾಸಂಸ್ಥೆಯ ಸಹಯೋಗದಿಂದಾಗಲಿ ಮಕ್ಕಳ ಗೃಹಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ, ಮಕ್ಕಳ ಗೃಹದ ಗುಣಮಟ್ಟಗಳು ಮತ್ತು ಅವು ಒದಗಿಸಬೇಕಾದ ಸೇವಾ ಸ್ವರೂಪಗಳೂ ಒಳಗೊಂಡಂತೆ, ಮಕ್ಕಳ ಗೃಹಗಳ ನಿರ್ವಹಣೆಯ ಬಗ್ಗೆ ಮತ್ತು ಮಕ್ಕಳ ಗೃಹಕ್ಕೆ ಪ್ರಮಾಣೀಕರಣವನ್ನು ಅಥವಾ ಸ್ವಯಂಸೇವಾ ಸಂಸ್ಥೆಗೆ ಮಾನ್ಯತೆಯನ್ನು ಯಾವ ಸಂದರ್ಭದಲ್ಲಿ ಮತ್ತು ಯಾವ ವಿಧಾನದಲ್ಲಿ ನೀಡಬಹುದು ಅಥವಾ ಹಿಂದಕ್ಕೆ ಪಡೆಯಬಹುದು ಎಂಬ ಬಗ್ಗೆ ಉಪಬಂಧ ಕಲ್ಪಿಸಬಹುದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಅದಕ್ಕೆ ಬಾಧಕವಾಗದಂತೆ ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳಿಗಾಗಿ ರಾಜ್ಯ ಸರ್ಕಾರವು ನಡೆಸುತ್ತಿರುವ ಅಥವಾ ಸ್ವಯಂ ಸೇವಾ ಸಂಘಟನೆಗಳು ನಡೆಸುತ್ತಿರುವ ಎಲ್ಲ ಸಂಸ್ಥೆಗಳನ್ನು, ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಅಧಿನಿಯಮ, 2006ರ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ ಈ ಅಧಿನಿಯಮದ ಅಡಿಯಲ್ಲಿ ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ನೋಂದಾಯಿಸತಕ್ಕದ್ದು.

**35. ಪರಿವೀಕ್ಷಣೆ.–** (1) ರಾಜ್ಯ ಸರ್ಕಾರವು, ಸಂದರ್ಭಾನುಸಾರ ರಾಜ್ಯಕ್ಕೆ, ಜಿಲ್ಲೆಗೆ ಮತ್ತು ನಗರಕ್ಕೆ, ಅದು ಗೊತ್ತುಪಡಿಸಬಹುದಾದಂಥ ಅವಧಿ ಮತ್ತು ಅಂಥ ಉದ್ದೇಶಗಳಿಗಾಗಿ ಮಕ್ಕಳ ಗೃಹಗಳಿಗೆ ಪರಿವೀಕ್ಷಣಾ ಸಮಿತಿಗಳನ್ನು (ಇದರಲ್ಲಿ ಇನ್ನು ಮುಂದೆ ಪರಿವೀಕ್ಷಣಾ ಸಮಿತಿಗಳೆಂದು ಉಲ್ಲೇಖಿಸಲಾಗಿದೆ) ನೇಮಿಸಬಹುದು.

(2) ರಾಜ್ಯದ, ಜಿಲ್ಲೆಯ ಅಥವಾ ನಗರದ ಪರಿವೀಕ್ಷಣಾ ಸಮಿತಿಯು ರಾಜ್ಯ ಸರ್ಕಾರದ, ಸಮಿತಿಯ, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಮತ್ತು ಗೊತ್ತುಪಡಿಸಬಹುದಾದಂಥ ಇತರ ವೈದ್ಯಕೀಯ ತಜ್ಞರನ್ನು ಮತ್ತು ಸಮಾಜ ಸೇವಕರನ್ನು ಒಳಗೊಂಡಿರತಕ್ಕದ್ದು.

**36. ಸಾಮಾಜಿಕ ಪರಿಶೀಲನೆ.–** ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಆ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಯಲ್ಲಿ ಮತ್ತು ಅಂಥ ವ್ಯಕ್ತಿಗಳ ಮತ್ತು ಸಂಸ್ಥೆಗಳ ಮೂಲಕ ಮಕ್ಕಳ ಗೃಹಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮತ್ತು ಮೌಲ್ಯ ನಿರ್ಧರಣೆ ಮಾಡಬಹುದು.

**37. ಆಶ್ರಯ ಗೃಹಗಳು.–** (1) ರಾಜ್ಯ ಸರ್ಕಾರವು, ಖ್ಯಾತ ಮತ್ತು ಸಮರ್ಥ ಸ್ವಯಂಸೇವಾ ಸಂಸ್ಥೆಗಳಿಗೆ ಮನ್ನಣೆ ನೀಡಬಹುದು ಮತ್ತು ಬಾಲಕರಿಗೆ ಅಥವಾ ಮಕ್ಕಳಿಗೆ ಅಗತ್ಯವಿರಬಹುದಾದಷ್ಟು ಸಂಖ್ಯೆಯ ಆಶ್ರಯ ಗೃಹಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಿಕೊಂಡು ಬರಲು ಅವುಗಳಿಗೆ ನೆರವು ನೀಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಆಶ್ರಯ ಗೃಹಗಳು, 32ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಂಥ ವ್ಯಕ್ತಿಗಳ ಮೂಲಕ ಅಂಥ ಗೃಹಗಳಿಗೆ ತರಲಾದ ತುರ್ತು ಆಶ್ರಯದ ಅವಶ್ಯಕತೆ ಇರುವ ಮಕ್ಕಳನ್ನು ತಂದುಬಿಡುವ ಕೇಂದ್ರಗಳಾಗಿ ಕಾರ್ಯನಿರ್ವಹಿಸತಕ್ಕದ್ದು.

(3) ಸಾಧ್ಯವಾದಷ್ಟುಮಟ್ಟಿಗೆ, ಆಶ್ರಯ ಗೃಹಗಳು ನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

**38. ವರ್ಗಾವಣೆ.–** (1) ವಿಚಾರಣೆಯ ಸಮಯದಲ್ಲಿ, ಮಗುವು ಸಮಿತಿಯ ಅಧಿಕಾರ ವ್ಯಾಪ್ತಿಯ ಹೊರಗಿನ ಸ್ಥಳದ್ದೆಂದು ಕಂಡುಬಂದರೆ, ಸಮಿತಿಯು ಮಗುವು ವಾಸಿಸುವ ಸ್ಥಳದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಕ್ಷಮ ಪ್ರಾಧಿಕಾರಕ್ಕೆ ಮಗುವನ್ನು ವರ್ಗಾವಣೆ ಮಾಡುವಂತೆ ಆದೇಶಿಸತಕ್ಕದ್ದು.

(2) ಅಂಥ ಬಾಲಕನನ್ನು ಅಥವಾ ಮಗುವನ್ನು, ಅವನನ್ನು ಮೊದಲು ಇಟ್ಟಿದ್ದ ಗೃಹದ ಸಿಬ್ಬಂದಿಯ ಬೆಂಗಾವಲಿನಲ್ಲಿ ಕಳುಹಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಮಗುವಿಗೆ ಸಂದಾಯ ಮಾಡಬೇಕಾದ ಪ್ರಯಾಣ ಭತ್ಯೆಯನ್ನು ಒದಗಿಸುವುದಕ್ಕೆ ನಿಯಮಗಳನ್ನು ರಚಿಸಬಹುದು.

**39. ಹಿಂದಕ್ಕೆ ಒಪ್ಪಿಸಿಕೊಡುವುದು.–** (1) ಮಗುವನ್ನು ಹಿಂದಕ್ಕೆ ಒಪ್ಪಿಸಿ ಕೊಡುವುದು ಮತ್ತು ಅದನ್ನು ರಕ್ಷಿಸುವುದು ಯಾವುದೇ ಮಕ್ಕಳ ಗೃಹ ಅಥವಾ ಆಶ್ರಯ ಗೃಹದ ಮುಖ್ಯ ಉದ್ದೇಶವಾಗಿರತಕ್ಕದ್ದು.

(2) ಮಕ್ಕಳ ಗೃಹವಾಗಲಿ ಅಥವಾ ಸಂದರ್ಭಾನುಸಾರ ಆಶ್ರಯ ಗೃಹವಾಗಲಿ, ಮಗುವು ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ತನ್ನ ಕೌಟುಂಬಿಕ ಪರಿಸರದಿಂದ ವಂಚಿತನಾಗಿದ್ದು, ಆ ಮಗುವು ಮಕ್ಕಳ ಗೃಹ ಅಥವಾ ಸಂದರ್ಭಾನುಸಾರ ಆಶ್ರಯ ಗೃಹದ ಪಾಲನೆಯಲ್ಲಿ ಮತ್ತು ರಕ್ಷಣೆಯಲ್ಲಿರುವಲ್ಲಿ, ಅಂಥ ಮಗುವನ್ನು ಪುನಃ ಹಿಂದಕ್ಕೆ ಒಪ್ಪಿಸಿಕೊಡುವುದಕ್ಕಾಗಿ ಮತ್ತು ರಕ್ಷಿಸುವುದಕ್ಕಾಗಿ ಅವಶ್ಯವೆಂದು ಪರಿಗಣಿಸುವಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ಸಮಿತಿಯು, ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಯಾವುದೇ ಮಗುವನ್ನು ಸಂದರ್ಭಾನುಸಾರ, ಅದರ ತಂದೆ–ತಾಯಿಗೆ, ಪಾಲಕನಿಗೆ, ಸೂಕ್ತ ವ್ಯಕ್ತಿಗೆ ಅಥವಾ ಸೂಕ್ತ ಸಂಸ್ಥೆಗೆ ಹಿಂದಕ್ಕೆ ಒಪ್ಪಿಸಿಕೊಡುವ ಮತ್ತು ಅವರಿಗೆ ಯುಕ್ತ ನಿರ್ದೇಶನಗಳನ್ನು ನೀಡುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ಮಗುವನ್ನು ಹಿಂದಕ್ಕೆ ಒಪ್ಪಿಸಿಕೊಡುವುದು" ಮತ್ತು ಅದನ್ನು ರಕ್ಷಿಸುವುದು ಎಂದರೆ,–

(ಎ) ತಂದೆ ತಾಯಿಗೆ;

(ಬಿ) ದತ್ತು ತೆಗೆದುಕೊಂಡ ತಂದೆತಾಯಿಗೆ;

(ಸಿ) ಸಾಕು ತಂದೆ ತಾಯಿಗೆ;

(ಡಿ) ಪಾಲಕರಿಗೆ;

(ಇ) ಸೂಕ್ತ ವ್ಯಕ್ತಿಗೆ;

(ಎಫ್) ಸೂಕ್ತ ಸಂಸ್ಥೆಗೆ

– ಹಿಂದಕ್ಕೆ ಒಪ್ಪಿಸಿಕೊಡುವುದು.

## ಅಧ್ಯಾಯ – IV

### ಪುನರ್ವಸತಿ ಮತ್ತು ಸಮಾಜದಲ್ಲಿ ಪುನಃ ಬೆರೆಯುವುದು

**40. ಪುನರ್ವಸತಿ ಮತ್ತು ಸಮಾಜದಲ್ಲಿ ಪುನಃ ಬೆರೆಯುವ ಪ್ರಕ್ರಿಯೆ.–** ಮಗುವಿನ ಪುನರ್ವಸತಿ ಮತ್ತು ಅದು ಸಮಾಜದಲ್ಲಿ ಪುನಃ ಬೆರೆಯುವ ಕಾರ್ಯವು, ಆ ಮಗುವು ಮಕ್ಕಳ ಗೃಹದಲ್ಲಿ ಅಥವಾ ವಿಶೇಷ ಗೃಹದಲ್ಲಿರುವ ಅವಧಿಯಲ್ಲಿ ಪ್ರಾರಂಭವಾಗತಕ್ಕದ್ದು ಮತ್ತು ಮಕ್ಕಳ ಪುನರ್ವಸತಿಯನ್ನು ಹಾಗೂ ಅವು ಸಮಾಜದಲ್ಲಿ ಪುನಃ ಬೆರೆಯುವುದನ್ನು, ಪರ್ಯಾಯವಾಗಿ (i) ದತ್ತು ತೆಗೆದುಕೊಳ್ಳುವ, (ii) ಸಾಕಿ ಸಲಹುವ, (iii) ಪ್ರಾಯೋಜಿಸುವ, ಮತ್ತು (iv) ಮಗುವನ್ನು ಅನುಪಾಲನಾ ಸಂಸ್ಥೆಗೆ ಕಳುಹಿಸುವ ಮೂಲಕ ಕಾರ್ಯಗತಗೊಳಿಸತಕ್ಕದ್ದು.

**41. ದತ್ತು ಸ್ವೀಕಾರ.–** (1) ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸುವುದು ಅವರ ಕುಟುಂಬದ ಮೊದಲ ಜವಾಬ್ದಾರಿಯಾಗಿರತಕ್ಕದ್ದು.

(2) ಅನಾಥರಾದ, ಪರಿತ್ಯಕ್ತರಾದ ಅಥವಾ ಬಿಟ್ಟುಕೊಟ್ಟ ಮಕ್ಕಳಿಗೆ ಗೊತ್ತುಪಡಿಸಬಹುದಾದಂಥ ವ್ಯವಸ್ಥೆಯ ಮೂಲಕ ಪುನರ್ವಸತಿಗಾಗಿ ದತ್ತುಸ್ವೀಕಾರವನ್ನು ಅವಲಂಬಿಸತಕ್ಕದ್ದು.

(3) ದತ್ತಕಕ್ಕಾಗಿ ಕಾಲಕಾಲಕ್ಕೆ, ರಾಜ್ಯ ಸರ್ಕಾರವು, ಅಥವಾ ಕೇಂದ್ರ ದತ್ತಕ ಸಂಪನ್ಮೂಲ ಏಜೆನ್ಸಿಯು ಹೊರಡಿಸಿದ ಮತ್ತು ಕೇಂದ್ರ ಸರ್ಕಾರವು ಅಧಿಸೂಚಿಸಿದ ವಿವಿಧ ಮಾರ್ಗಸೂಚಿಗಳ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು, ನ್ಯಾಯಾಲಯವು, ಮಕ್ಕಳನ್ನು ದತ್ತು ನೀಡುವುದಕ್ಕಾಗಿ ಅಗತ್ಯಪಡಿಸಲಾಗಿರುವ ತನಿಖೆಗಳನ್ನು ನಡೆಸಿರುವ ಬಗ್ಗೆ ಸ್ವತ: ಮನದಟ್ಟು ಮಾಡಿಕೊಂಡ ತರುವಾಯ ಅಂಥ ಮಕ್ಕಳನ್ನು ದತ್ತಕ ನೀಡಬಹುದು.

(4) ರಾಜ್ಯ ಸರ್ಕಾರವು (3)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಮಾರ್ಗಸೂಚಿಗಳಿಗೆ ಅನುಸಾರವಾಗಿ ದತ್ತಕ ಸ್ವೀಕಾರಕ್ಕಾಗಿ ಅನಾಥ, ಪರಿತ್ಯಕ್ತ ಅಥವಾ ಬಿಟ್ಟುಕೊಟ್ಟಿರುವ ಮಕ್ಕಳ ಸೂಕ್ತ ಏರ್ಪಾಡಿಗಾಗಿ ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿನ ಒಂದು ಅಥವಾ ಅದಕ್ಕಿಂತ ಹೆಚ್ಚು ತನ್ನ ಸಂಸ್ಥೆಗಳನ್ನು ಅಥವಾ ಸ್ವಯಂ ಸೇವಾ ಸಂಘಟನೆಗಳನ್ನು ವಿಶೇಷ ದತ್ತಕ ಏಜೆನ್ಸಿಗಳೆಂದು ಮನ್ನಣೆ ನೀಡತಕ್ಕದ್ದು:

ಪರಂತು, ಪಾಲನೆ ಮತ್ತು ರಕ್ಷಣೆಯ ಅಗತ್ಯತೆ ಇರುವ ಅನಾಥ, ಪರಿತ್ಯಕ್ತ ಅಥವಾ ಬಿಟ್ಟುಕೊಟ್ಟ ಮಕ್ಕಳಿಗಾಗಿ ರಾಜ್ಯ ಸರ್ಕಾರವು ಅಥವಾ ಸ್ವಯಂ ಸೇವಾ ಸಂಘಟನೆಯು ನಡೆಸುತ್ತಿರುವ ಮಕ್ಕಳ ಗೃಹಗಳು ಮತ್ತು ಸಂಸ್ಥೆಗಳು, ಈ ಮಕ್ಕಳು ದತ್ತಕಕ್ಕಾಗಿ ಮುಕ್ತವಾಗಿವೆ ಎಂದು ಸಮಿತಿಯು ಘೋಷಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಮಾರ್ಗಸೂಚಿಗಳಿಗೆ ಅನುಸಾರವಾಗಿ ಅಂಥ ಮಕ್ಕಳ ದತ್ತಕದ ಸೂಕ್ತ ಏರ್ಪಾಡಿಗಾಗಿ ಆ ಜಿಲ್ಲೆಯಲ್ಲಿನ ದತ್ತಕ ಏಜೆನ್ಸಿಗೆ ಅಂಥ ಎಲ್ಲಾ ಪ್ರಕರಣಗಳನ್ನು ಉಲ್ಲೇಖಿಸತಕ್ಕದ್ದು.

(5) ಯಾವುದೇ ಮಗುವನ್ನು,–

(ಎ) ಪರಿತ್ಯಕ್ತ ಮಕ್ಕಳ ಸಂದರ್ಭದಲ್ಲಿ, ಸಮಿತಿಯ ಇಬ್ಬರು ಸದಸ್ಯರು ಆ ಮಗು, ಸ್ಥಳ ನಿಯೋಜನೆಗೆ ಕಾನೂನುಬದ್ಧವಾಗಿ ಮುಕ್ತವಾಗಿದೆಯೆಂದು ಘೋಷಿಸುವವರೆಗೆ;

(ಬಿ) ಬಿಟ್ಟುಕೊಟ್ಟ ಮಗುವಿನ ಸಂದರ್ಭದಲ್ಲಿ ತಂದೆ-ತಾಯಿಯರಿಗೆ ಪುನರ್ ಪರಿಶೀಲನೆಗಾಗಿ ನೀಡಿದ್ದ ಎರಡು ತಿಂಗಳ ಅವಧಿ ಮುಗಿಯುವವರೆಗೆ; ಮತ್ತು

(ಸಿ) ಅರ್ಥಮಾಡಿಕೊಳ್ಳಬಲ್ಲ ಮತ್ತು ತನ್ನ ಸಮ್ಮತಿ ಸೂಚಿಸಬಲ್ಲ ಮಗುವಿನ ಸಂದರ್ಭದಲ್ಲಿ ಅವನ ಸಮ್ಮತಿ ಇಲ್ಲದೆ

– ದತ್ತು ನೀಡತಕ್ಕದ್ದಲ್ಲ.

(6) ನ್ಯಾಯಾಲಯವು,-

(ಎ) ವೈವಾಹಿಕ ಸ್ಥಾನಮಾನವನ್ನು ಗಣನೆಗೆ ತೆಗೆದುಕೊಳ್ಳದೆ ಒಬ್ಬ ವ್ಯಕ್ತಿಗೆ; ಅಥವಾ

(ಬಿ) ತಂದೆ ತಾಯಿಯರಿಗೆ ಜೀವಂತವಿರುವ ಸ್ವಂತ ಗಂಡು ಮಕ್ಕಳು ಅಥವಾ ಹೆಣ್ಣುಮಕ್ಕಳು ಎಷ್ಟೇ ಇದ್ದರೂ ಸಹ ಅದೇ ಲಿಂಗದ ಮಗುವನ್ನು; ಅಥವಾ

(ಸಿ) ಮಕ್ಕಳಿಲ್ಲದ ದಂಪತಿಗಳಿಗೆ ಮಗುವನ್ನು ದತ್ತು ತೆಗೆದುಕೊಳ್ಳಲು

– ಅನುಮತಿ ನೀಡಬಹುದು.

**42. ಸಾಕಿ ಸಲಹುವುದು.-** (1) ಅಂತಿಮವಾಗಿ ದತ್ತು ಸ್ವೀಕಾರಕ್ಕೆ ಕೊಡಲಿರುವ ಶಿಶುಗಳನ್ನು ಸಾಕಿ ಸಲಹಲು ತಾತ್ಕಾಲಿಕ ಸ್ಥಳ ನಿಯೋಜನೆಯನ್ನು ಉಪಯೋಗಿಸಬಹುದು.

(2) ಸಾಕಿಸಲಹುವಲ್ಲಿ, ಮಗುವಿನ ಸ್ವಂತ ತಂದೆತಾಯಿಗಳು ಸಾಮಾನ್ಯವಾಗಿ ನಿಯತವಾಗಿ ಭೇಟಿಮಾಡುವ ಸನ್ನಿವೇಶಗಳನ್ನು ಅವಲಂಬಿಸಿ, ಮಗುವನ್ನು ಒಂದು ಅಲ್ಪ ಅಥವಾ ವಿಸ್ತರಿತ ಕಾಲಾವಧಿಗಾಗಿ, ಬೇರೊಂದು ಕುಟುಂಬದಲ್ಲಿ ಬಿಡಬಹುದು ಮತ್ತು ಕೊನೆಯಲ್ಲಿ ಪುನರ್ವಸತಿಯ ನಂತರ ಮಕ್ಕಳು ಅವರ ಸ್ವಂತ ಮನೆಗಳಿಗೆ ಹಿಂದಿರುಗಬಹುದು.

(3) ರಾಜ್ಯ ಸರ್ಕಾರವು, ಮಕ್ಕಳ ಸಾಕಿಸಲಹುವ ಕಾರ್ಯಕ್ರಮದ ಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

**43. ಪ್ರಾಯೋಜಕತ್ವ.-** (1) ಪ್ರಾಯೋಜಕತ್ವ ಕಾರ್ಯಕ್ರಮವು ಮಕ್ಕಳ ಜೀವನದ ಗುಣಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ಮಕ್ಕಳಿಗೆ ವೈದ್ಯಕೀಯ, ಪೌಷ್ಠಿಕ ಆಹಾರ, ಶೈಕ್ಷಣಿಕ ಮತ್ತು ಇತರೆ ಅವಶ್ಯಕತೆಗಳನ್ನೊದಗಿಸುವಲ್ಲಿ ಕುಟುಂಬಗಳಿಗೆ, ಮಕ್ಕಳ ಗೃಹಗಳಿಗೆ ಮತ್ತು ವಿಶೇಷ ಗೃಹಗಳಿಗೆ ಪೂರಕ ಬೆಂಬಲವನ್ನು ಒದಗಿಸಬಹುದು.

(2) ರಾಜ್ಯ ಸರ್ಕಾರವು, ವ್ಯಕ್ತಿಯಿಂದ- ವ್ಯಕ್ತಿಗೆ ಪ್ರಾಯೋಜಕತ್ವ, ಸಮೂಹ ಪ್ರಾಯೋಜಕತ್ವ ಅಥವಾ ಸಮುದಾಯ ಪ್ರಾಯೋಜಕತ್ವದಂಥ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

**44. ಅನುಪಾಲನಾ ಸಂಸ್ಥೆ.-** ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ,-

(ಎ) ಅನುಪಾಲನಾ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಅಥವಾ ಅವುಗಳಿಗೆ ಮಾನ್ಯತೆ ನೀಡುವುದಕ್ಕೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಅವು ನಿರ್ವಹಿಸಬಹುದಾದ ಪ್ರಕಾರ್ಯಗಳಿಗಾಗಿ;

(ಬಿ) ಬಾಲಕರು ಅಥವಾ ಮಕ್ಕಳು ವಿಶೇಷ ಗೃಹ ಅಥವಾ ಮಕ್ಕಳ ಗೃಹಗಳನ್ನು ಬಿಟ್ಟ ನಂತರ ಅವರ ಪಾಲನೆಯನ್ನು ನೋಡಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಅವರು ಪ್ರಾಮಾಣಿಕ, ಉದ್ಯೋಗಶೀಲ ಮತ್ತು ಉಪಯುಕ್ತ ಜೀವನ ನಡೆಸಲು ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ಅಂಥ ಅನುಪಾಲನಾ ಸಂಸ್ಥೆಗಳು ಅನುಸರಿಸತಕ್ಕ ಒಂದು ಅನುಪಾಲನಾ ಕಾರ್ಯಕ್ರಮದ ಒಂದು ಯೋಜನೆಗಾಗಿ;

(ಸಿ) ವಿಶೇಷ ಗೃಹದಿಂದ, ಮಕ್ಕಳ ಗೃಹದಿಂದ ಬಾಲಕ ಅಥವಾ ಮಗುವನ್ನು ಬಿಡುಗಡೆ ಮಾಡುವುದಕ್ಕೆ ಮುಂಚೆ ಅಂಥ ಪ್ರತಿಯೊಬ್ಬ ಬಾಲಕ ಅಥವಾ ಮಗುವಿನ ಸಂಬಂಧದಲ್ಲಿ ಆ ಸರ್ಕಾರದಿಂದ ನೇಮಕಗೊಂಡ ಪರಿವೀಕ್ಷಣಾಧಿಕಾರಿ ಅಥವಾ ಯಾರೇ ಇತರೆ ಅಧಿಕಾರಿಯು, ಅಂಥ ಬಾಲಕ ಅಥವಾ ಮಗುವಿನ ಅನುಪಾಲನೆಯ ಅವಶ್ಯಕತೆ ಮತ್ತು ಸ್ವರೂಪ, ಅಂಥ ಅನುಪಾಲನೆಯ ಅವಧಿ, ಅದರ ಮೇಲ್ವಿಚಾರಣೆಯ ಸಂಬಂಧವಾಗಿ ಒಂದು ವರದಿ ತಯಾರಿಸುವುದಕ್ಕಾಗಿ ಅಥವಾ ಸಲ್ಲಿಸುವುದಕ್ಕಾಗಿ ಮತ್ತು

ಅಂಥ ಪ್ರತಿಯೊಬ್ಬ ಬಾಲಕನ ಅಥವಾ ಮಗುವಿನ ಪ್ರಗತಿಯ ಬಗ್ಗೆ ಪರಿವೀಕ್ಷಣಾಧಿಕಾರಿ ಅಥವಾ ಈ ಉದ್ದೇಶಕ್ಕಾಗಿ ನೇಮಕಗೊಂಡ ಯಾರೇ ಇತರೆ ಅಧಿಕಾರಿಯು ವರದಿ ಸಲ್ಲಿಸುವುದಕ್ಕಾಗಿ;

(ಡಿ) ಅಂಥ ಅನುಪಾಲನಾ ಸಂಸ್ಥೆಗಳು ನಿರ್ವಹಿಸಬೇಕಾದ ಸೇವೆಗಳ ಗುಣಮಟ್ಟಗಳು ಮತ್ತು ಸ್ವರೂಪಕ್ಕಾಗಿ;

(ಇ) ಬಾಲಕ ಅಥವಾ ಮಗುವಿನ ಅನುಪಾಲನಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ಅವಶ್ಯವಿರಬಹುದಾದಂಥ ಇತರೆ ವಿಷಯಗಳಿಗಾಗಿ

– ಉಪಬಂಧ ಕಲ್ಪಿಸಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮವು ಅಂಥ ಬಾಲಕ ಅಥವಾ ಮಗುವು ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಅನುಪಾಲನಾ ಸಂಸ್ಥೆಗಳಲ್ಲಿ ಉಳಿಯಲು ಉಪಬಂಧಿಸತಕ್ಕದ್ದಲ್ಲ:

ಮತ್ತೂ ಪರಂತು, ಹದಿನೇಳು ವರ್ಷಗಳು ತುಂಬಿರುವ ಆದರೆ ಹದಿನೆಂಟು ವರ್ಷಕ್ಕಿಂತ ಕಡಿಮೆ ಇರುವ ಬಾಲಕ ಅಥವಾ ಮಗುವು ಇಪ್ಪತ್ತು ವರ್ಷಗಳ ವಯಸ್ಸನ್ನು ಹೊಂದುವವರೆಗೆ ಅನುಪಾಲನಾ ಸಂಸ್ಥೆಯಲ್ಲಿ ಉಳಿದುಕೊಳ್ಳಬಹುದು.

**45. ಸಂಪರ್ಕ ಮತ್ತು ಸಮನ್ವಯ.–** ರಾಜ್ಯ ಸರ್ಕಾರವು, ಮಗುವಿನ ಪುನರ್ವಸತಿಗಾಗಿ ಮತ್ತು ಸಮಾಜದಲ್ಲಿ ಪುನಃ ಬೆರೆಯುವುದಕ್ಕಾಗಿ ವಿವಿಧ ಸರ್ಕಾರಿ, ಸರ್ಕಾರೇತರ, ಕಾರ್ಪೋರೇಟ್ ಮತ್ತು ಇತರೆ ಸಮುದಾಯ ಏಜೆನ್ಸಿಗಳ ನಡುವೆ ಪರಿಣಾಮಕಾರಿ ಸಂಪರ್ಕವನ್ನು ಖಾತರಿಗೊಳಿಸುವುದಕ್ಕೆ ನಿಯಮಗಳನ್ನು ರಚಿಸಬಹುದು.

## ಅಧ್ಯಾಯ – V

## ಸಂಕೀರ್ಣ

**46. ಬಾಲಕನ ಅಥವಾ ಮಗುವಿನ ತಂದೆ-ತಾಯಿ ಅಥವಾ ಪಾಲಕನು ಹಾಜರಿರುವುದು.–** ಈ ಅಧಿನಿಯಮದ ಯಾವುದೇ ಉಪಬಂಧದ ಅಡಿಯಲ್ಲಿ ಬಾಲಕನನ್ನು ಅಥವಾ ಮಗುವನ್ನು ಯಾವ ಸಕ್ಷಮ ಪ್ರಾಧಿಕಾರದ ಮುಂದೆ ಕರೆತರಲಾಗಿದೆಯೋ, ಆ ಸಕ್ಷಮ ಪ್ರಾಧಿಕಾರವು, ಆ ಬಾಲಕನ ಅಥವಾ ಮಗುವಿನ ತಂದೆ-ತಾಯಿಯು ಅಥವಾ ಅವನ ವಾಸ್ತವಿಕ ಹೊಣೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಯಾರೇ ಪಾಲಕನು, ಬಾಲಕ ಅಥವಾ ಮಗುವಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆಯಲ್ಲಿ ಹಾಜರಿರುವುದು ಸೂಕ್ತವೆಂದು ಅದು ಭಾವಿಸಿದಾಗಲೆಲ್ಲಾ, ಹಾಗೆ ಹಾಜರಿರುವಂತೆ ಅಗತ್ಯಪಡಿಸಬಹುದು.

**47. ಬಾಲಕನ ಅಥವಾ ಮಗುವಿನ ಹಾಜರಾತಿಗೆ ವಿನಾಯಿತಿ.–** ವಿಚಾರಣೆ ನಡೆಯುವ ಯಾವುದೇ ಹಂತದಲ್ಲಿ, ಸಕ್ಷಮ ಪ್ರಾಧಿಕಾರಕ್ಕೆ ಆ ವಿಚಾರಣೆಯ ಉದ್ದೇಶಕ್ಕಾಗಿ ಆ ಬಾಲಕನ ಅಥವಾ ಮಗುವಿನ ಹಾಜರಾತಿಯು ಅವಶ್ಯಕವಿಲ್ಲವೆಂದು ಮನದಟ್ಟಾದರೆ, ಆ ಸಕ್ಷಮ ಪ್ರಾಧಿಕಾರವು ಅವನ ಅಥವಾ ಅದರ ಹಾಜರಾತಿಗೆ ವಿನಾಯಿತಿ ನೀಡಬಹುದು ಮತ್ತು ಅಂಥ ಬಾಲಕನ ಅಥವಾ ಮಗುವಿನ ಗೈರುಹಾಜರಿಯಲ್ಲಿ ವಿಚಾರಣೆಯನ್ನು ಮುಂದುವರೆಸಬಹುದು.

**48. ಅಪಾಯಕಾರಿ ರೋಗದಿಂದ ನರಳುತ್ತಿರುವ ಬಾಲಕನನ್ನು ಅಥವಾ ಮಗುವನ್ನು ಅನುಮೋದಿತ ಸ್ಥಳಕ್ಕೆ ಒಪ್ಪಿಸುವುದು ಮತ್ತು ಅವನ ಬಗ್ಗೆ ಮುಂದಿನ ಏರ್ಪಾಡು.–** (1) ಈ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದ ಮುಂದೆ ತರಲಾಗಿರುವ ಬಾಲಕ ಅಥವಾ ಮಗುವು, ಸುದೀರ್ಘ ವೈದ್ಯಕೀಯ ಚಿಕಿತ್ಸೆ ಅಗತ್ಯವಿರುವ ರೋಗದಿಂದ ಅಥವಾ ಚಿಕಿತ್ಸೆಗೆ ಪ್ರತಿಕ್ರಿಯಿಸುವ ದೈಹಿಕ ಅಥವಾ ಮಾನಸಿಕ ತೊಂದರೆಯಿಂದ ನರಳುತ್ತಿರುವುದಾಗಿ ಕಂಡುಬಂದರೆ, ಸಕ್ಷಮ ಪ್ರಾಧಿಕಾರವು ಆ ಬಾಲಕನನ್ನು ಅಥವಾ ಮಗುವನ್ನು ಅಗತ್ಯವಾದ ಚಿಕಿತ್ಸೆಗಾಗಿ ತಾನು ಅವಶ್ಯವೆಂದು ಯೋಚಿಸಬಹುದಾದಂಥ ಅವಧಿಯವರೆಗೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ ಅನುಮೋದಿತ ಸ್ಥಳವೆಂದು ಮಾನ್ಯತೆ ಪಡೆದ ಯಾವುದೇ ಸ್ಥಳಕ್ಕೆ ಕಳುಹಿಸಬಹುದು.

(2) ಬಾಲಕ ಅಥವಾ ಮಗುವು ಕುಷ್ಠರೋಗ, ಲೈಂಗಿಕವಾಗಿ ಹರಡಿದ ರೋಗ, ಹೆಪಟೈಟಿಸ್-ಬಿ, ವ್ಯಕ್ತ ಕ್ಷಯರೋಗ ಮತ್ತು ಅಂಥ ಇತರೆ ರೋಗಗಳಿಂದ ನರಳುತ್ತಿರುವುದು ಅಥವಾ ಅಸ್ವಸ್ಥಚಿತ್ತನಾಗಿರುವುದು ಕಂಡುಬಂದಲ್ಲಿ, ಅವನನ್ನು ಬೇರೆ ಬೇರೆ ತಜ್ಞ ಸಮಾಲೋಚನಾ ಸೇವೆಗಳ ಮೂಲಕ ಅಥವಾ ಸಂಬಂಧಪಟ್ಟ ಕಾನೂನುಗಳ ಅಡಿಯಲ್ಲಿ ಪ್ರತ್ಯೇಕವಾಗಿ ವ್ಯವಹರಿಸಿ ಕ್ರಮ ತೆಗೆದುಕೊಳ್ಳತಕ್ಕದ್ದು.

**49. ವಯಸ್ಸಿನ ಬಗ್ಗೆ ಪೂರ್ವಭಾವನೆ ಮತ್ತು ನಿರ್ಧರಣೆ.–** (1) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಡಿಯಲ್ಲಿ ತನ್ನ ಮುಂದೆ (ಸಾಕ್ಷ್ಯವನ್ನು ಕೊಡುವ ಉದ್ದೇಶವನ್ನು ಹೊರತುಪಡಿಸಿ) ಕರೆತರಲಾದ ವ್ಯಕ್ತಿಯು ಬಾಲಕನೆಂದು ಅಥವಾ ಮಗುವೆಂದು ಸಕ್ಷಮ ಪ್ರಾಧಿಕಾರಕ್ಕೆ ಕಂಡುಬರುವಲ್ಲಿ, ಆ ಸಕ್ಷಮ ಪ್ರಾಧಿಕಾರವು ಆ ವ್ಯಕ್ತಿಯ ವಯಸ್ಸಿನ ಬಗ್ಗೆ ಯುಕ್ತ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಂಥ ಸಾಕ್ಷ್ಯವನ್ನು (ಆದರೆ ಅಫಿಡಾವಿಟ್ ಅಲ್ಲ) ತೆಗೆದುಕೊಳ್ಳತಕ್ಕದ್ದು ಮತ್ತು ಅವನ ವಯಸ್ಸಿಗೆ ಸಾಧ್ಯವಾದಷ್ಟು ನಿಕಟವಾದ ವಯಸ್ಸನ್ನು ನಿರೂಪಿಸಿ ಆ ವ್ಯಕ್ತಿಯು ಬಾಲಕನೇ ಅಥವಾ ಮಗುವೇ ಅಥವಾ ಅಲ್ಲವೇ ಎಂಬ ಬಗ್ಗೆ ನಿರ್ಣಯವನ್ನು ದಾಖಲು ಮಾಡತಕ್ಕದ್ದು.

(2) ಸಕ್ಷಮ ಪ್ರಾಧಿಕಾರದ ಯಾವುದೇ ಆದೇಶವನ್ನು, ಯಾವ ವ್ಯಕ್ತಿಗೆ ಸಂಬಂಧಿಸಿದಂತೆ, ಮಾಡಲಾಗಿದೆಯೋ ಆ ವ್ಯಕ್ತಿಯು ಬಾಲಕನಲ್ಲವೆಂದು ಅಥವಾ ಮಗುವಲ್ಲವೆಂದು ಯಾವುದೇ ತರುವಾಯದ ರುಜುವಾತಿನ ಕಾರಣ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಭಾವಿಸತಕ್ಕದ್ದಲ್ಲ ಮತ್ತು ತನ್ನ ಮುಂದೆ ಹಾಗೆ ಕರೆತರಲಾದ ವ್ಯಕ್ತಿಯ ವಯಸ್ಸೆಂಬುದಾಗಿ ಆ ಸಕ್ಷಮ ಪ್ರಾಧಿಕಾರವು ದಾಖಲು ಮಾಡಿದ ವಯಸ್ಸನ್ನು, ಈ ಅಧಿನಿಯಮದ ಉದ್ದೇಶಕ್ಕಾಗಿ ಆ ವ್ಯಕ್ತಿಯ ನಿಜವಾದ ವಯಸ್ಸೆಂದು ಭಾವಿಸತಕ್ಕದ್ದು.

**50. ಬಾಲಕನನ್ನು ಅಥವಾ ಮಗುವನ್ನು ಅಧಿಕಾರ ವ್ಯಾಪ್ತಿಯ ಸ್ಥಳದ ಹೊರಗೆ ಕಳುಹಿಸುವುದು.–** ಬಾಲಕ ಅಥವಾ ಮಗುವನ್ನು, ಯಾವ ಸಕ್ಷಮ ಪ್ರಾಧಿಕಾರದ ಮುಂದೆ ಕರೆತರಲಾಗಿದೆಯೋ ಅದರ ಅಧಿಕಾರ ವ್ಯಾಪ್ತಿಯ ಹೊರಗೆ ಅವನ ಅಥವಾ ಅದರ ಸಾಮಾನ್ಯ ವಾಸಸ್ಥಳವು ಇರುವ ಸಂದರ್ಭದಲ್ಲಿ, ಆ ಸಕ್ಷಮ ಪ್ರಾಧಿಕಾರವು, ಯುಕ್ತ ವಿಚಾರಣೆಯ ತರುವಾಯ ಆ ಬಾಲಕನನ್ನು ಅಥವಾ ಮಗುವನ್ನು, ಅವನ ಸಾಮಾನ್ಯ ವಾಸಸ್ಥಳದಲ್ಲಿ ಸ್ವೀಕರಿಸಲು ಅರ್ಹನಾದ ಮತ್ತು ಇಚ್ಛಿಸುವ ಮತ್ತು ಅವನ ಅಥವಾ ಅದರ ಮೇಲೆ ಸರಿಯಾದ ಪಾಲನೆ ಮತ್ತು ನಿಯಂತ್ರಣವನ್ನು ಹೊಂದಿರುವ ಸಂಬಂಧಿಯ ಅಥವಾ ಇತರ ವ್ಯಕ್ತಿಯ ಬಳಿಗೆ, ಅಂಥ ವಾಸಸ್ಥಳವು ಆ ಸಕ್ಷಮ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ಹೊರಗೆ ಇದ್ದಾಗ್ಯೂ, ಅಲ್ಲಿಗೆ ಕಳುಹಿಸುವುದು ವಿಹಿತವೆಂದು ಅದಕ್ಕೆ ಮನದಟ್ಟಾದರೆ ಹಾಗೆ ಮಾಡಬಹುದು; ಮತ್ತು ಯಾವ ಸ್ಥಳಕ್ಕೆ ಆ ಬಾಲಕನನ್ನು ಅಥವಾ ಮಗುವನ್ನು ಕಳುಹಿಸಲಾಗಿದೆಯೋ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಸಕ್ಷಮ ಪ್ರಾಧಿಕಾರವು ಆ ತರುವಾಯ ಉದ್ಭವಿಸುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಆ ಬಾಲಕನ ಅಥವಾ ಮಗುವಿನ ಬಗ್ಗೆ ಮೂಲ ಆದೇಶವನ್ನು ತಾನೇ ಮಾಡಿದ್ದರೆ ಹೇಗೋ ಹಾಗೆ ಅವೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

**51. ವರದಿಗಳನ್ನು ರಹಸ್ಯವೆಂದು ಪರಿಗಣಿಸುವುದು.–** ಸಕ್ಷಮ ಪ್ರಾಧಿಕಾರವು ಪರಿಗಣಿಸಿದ ಪರಿವೀಕ್ಷಣಾಧಿಕಾರಿಯ ಅಥವಾ ಸಮಾಜ ಕಾರ್ಯಕರ್ತನ ವರದಿಯನ್ನು ರಹಸ್ಯವೆಂಬುದಾಗಿ ಪರಿಗಣಿಸತಕ್ಕದ್ದು:

ಪರಂತು, ಸಕ್ಷಮ ಪ್ರಾಧಿಕಾರವು, ಅದರ ಸಾರಾಂಶವನ್ನು ಆ ಬಾಲಕನಿಗೆ ಅಥವಾ ಮಗುವಿಗೆ ಅಥವಾ ಅವನ ತಂದೆ–ತಾಯಿಗೆ ಅಥವಾ ಪಾಲಕನಿಗೆ ತಿಳಿಸುವುದು ಸೂಕ್ತವೆಂದು ಭಾವಿಸಿದರೆ, ತಿಳಿಸಬಹುದು ಮತ್ತು ಅಂಥ ಬಾಲಕನಿಗೆ ಅಥವಾ ಮಗುವಿಗೆ, ತಂದೆ–ತಾಯಿಗೆ ಅಥವಾ ಪಾಲಕನಿಗೆ ಆ ವರದಿಯಲ್ಲಿ ನಮೂದಿಸಿದ ವಿಷಯಕ್ಕೆ ಸುಸಂಗತವಾಗಬಹುದಾದಂಥ ಸಾಕ್ಷ್ಯವನ್ನು ಹಾಜರುಪಡಿಸಲು ಅವಕಾಶವನ್ನು ಕೊಡಬಹುದು.

**52. ಅಪೀಲುಗಳು.–** (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಸೆಷನ್ಸ್ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಅಪೀಲುದಾರನು ಅಪೀಲನ್ನು ಸಕಾಲದಲ್ಲಿ ಸಲ್ಲಿಸಲು ಸಾಕಷ್ಟು ಕಾರಣದಿಂದಾಗಿ ಅವನಿಗೆ ಅಡ್ಡಿಯುಂಟಾಗಿತ್ತೆಂದು ಸೆಷನ್ಸ್ ನ್ಯಾಯಾಲಯಕ್ಕೆ ಮನದಟ್ಟಾದರೆ ಅದು ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

(2) ಯಾವುದೇ ಅಪೀಲನ್ನು,–

(ಎ) ಅಪರಾಧವನ್ನು ಮಾಡಿರುವನೆಂದು ಆರೋಪಿಸಲಾದ ಬಾಲಕನಿಗೆ ಸಂಬಂಧಿಸಿದಂತೆ ಮಂಡಲಿಯು ಮಾಡಿದ ಯಾವುದೇ ಖುಲಾಸೆಯ ಆದೇಶದ ಮೇಲೆ; ಅಥವಾ

(ಬಿ) ಆ ವ್ಯಕ್ತಿಯು ಉಪೇಕ್ಷಿತ ಬಾಲಕನಲ್ಲವೆಂಬ ನಿರ್ಣಯಕ್ಕೆ ಸಂಬಂಧಿಸಿದಂತೆ ಸಮಿತಿಯು ಮಾಡಿದ ಯಾವುದೇ ಆದೇಶದ ಮೇಲೆ

– ಹೂಡತಕ್ಕದ್ದಲ್ಲ.

(3) ಈ ಪ್ರಕರಣದ ಅಡಿಯಲ್ಲಿನ ಅಪೀಲಿನಲ್ಲಿ ಸೆಷನ್ಸ್ ನ್ಯಾಯಾಲಯವು ಮಾಡಿದ ಯಾವುದೇ ಆದೇಶದ ಮೇಲೆ ಯಾವುದೇ ಎರಡನೇ ಅಪೀಲನ್ನು ಹೂಡತಕ್ಕದ್ದಲ್ಲ.

**53. ಪುನರೀಕ್ಷಣೆ.–** ಉಚ್ಚ ನ್ಯಾಯಾಲಯವು ಯಾವುದೇ ಕಾಲದಲ್ಲಿ, ತಾನಾಗಿಯೇ ಆಗಲಿ ಅಥವಾ ಈ ಬಗ್ಗೆ ಅದು ಸ್ವೀಕರಿಸಿದ ಅರ್ಜಿಯ ಮೇಲೆ ಆಗಲಿ, ಯಾವ ವ್ಯವಹರಣೆಯಲ್ಲಿ ಯಾವುದೇ ಸಕ್ಷಮ ಪ್ರಾಧಿಕಾರವು ಅಥವಾ ಸೆಷನ್ಸ್ ನ್ಯಾಯಾಲಯವು ಆದೇಶವನ್ನು ಮಾಡಿದೆಯೋ ಅಂಥ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಂಥ ವ್ಯವಹರಣೆಯಲ್ಲಿನ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು:

ಪರಂತು, ಉಚ್ಚನ್ಯಾಯಾಲಯವು ಯಾರೇ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಈ ಪ್ರಕರಣದ ಅಡಿಯಲ್ಲಿ ಅವನಿಗೆ ಪ್ರತಿಕೂಲವಾಗುವ ಆದೇಶವನ್ನು ಮಾಡತಕ್ಕದ್ದಲ್ಲ.

**54. ವಿಚಾರಣೆಗಳಲ್ಲಿ, ಅಪೀಲುಗಳಲ್ಲಿ ಮತ್ತು ಪುನರೀಕ್ಷಣಾ ವ್ಯವಹರಣೆಗಳಲ್ಲಿ ಪ್ರಕ್ರಿಯೆ.–** (1) ಈ ಅಧಿನಿಯಮದ ಮೂಲಕ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು, ಸಕ್ಷಮ ಪ್ರಾಧಿಕಾರವು, ಈ ಅಧಿನಿಯಮದ ಯಾವುದೇ ಉಪಬಂಧದ ಅಡಿಯಲ್ಲಿ ಯಾವುದೇ ವಿಚಾರಣೆಯನ್ನು ನಡೆಸುವಾಗ, ಗೊತ್ತುಪಡಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು ಮತ್ತು ಅದಕ್ಕೊಳಪಟ್ಟು, ಸಾಧ್ಯವಾಗಬಹುದಾದಷ್ಟುಮಟ್ಟಿಗೆ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಸಮನ್ಸ್ ಪ್ರಕರಣಗಳಲ್ಲಿನ ಅಧಿವಿಚಾರಣೆಗಾಗಿ ಗೊತ್ತುಪಡಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಅಪೀಲುಗಳನ್ನು ಅಥವಾ ಪುನರೀಕ್ಷಣಾ ವ್ಯವಹರಣೆಗಳನ್ನು ವಿಚಾರಣೆ ಮಾಡುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯು, ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.

**55. ಆದೇಶಗಳನ್ನು ತಿದ್ದುಪಡಿಮಾಡಲು ಅಧಿಕಾರ.–** (1) ಈ ಅಧಿನಿಯಮದ ಅಡಿಯಲ್ಲಿನ ಅಪೀಲು ಮತ್ತು ಪುನರೀಕ್ಷಣೆಯ ಉಪಬಂಧಗಳಿಗೆ ಬಾಧಕವಾಗದಂತೆ ಯಾವುದೇ ಸಕ್ಷಮ ಪ್ರಾಧಿಕಾರವು ಬಾಲಕನನ್ನು ಅಥವಾ ಮಗುವನ್ನು ಈ ಅಧಿನಿಯಮದ ಅಡಿಯಲ್ಲಿ ಯಾವ ಸಂಸ್ಥೆಗೆ ಕಳುಹಿಸಬೇಕಾಗಿದೆಯೋ ಆ ಸಂಸ್ಥೆಯ ಬಗೆಗಿನ ಅಥವಾ ಯಾರ ರಕ್ಷಣೆಯಲ್ಲಿ ಅಥವಾ ಮೇಲ್ವಿಚಾರಣೆಯಲ್ಲಿ ಬಾಲಕನನ್ನು ಅಥವಾ ಮಗುವನ್ನು ಇಡಬೇಕಾಗಿದೆಯೋ ಆ ವ್ಯಕ್ತಿಯ ಬಗೆಗಿನ ಯಾವುದೇ ಆದೇಶವನ್ನು, ಈ ಬಗ್ಗೆ ಸ್ವೀಕರಿಸಿದ ಅರ್ಜಿಯ ಮೇಲೆ ತಿದ್ದುಪಡಿ ಮಾಡಬಹುದು:

ಪರಂತು, ಅದರ ಯಾವುದೇ ಆದೇಶದ ತಿದ್ದುಪಡಿ ಮಾಡುವುದಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಯುತ್ತಿರುವ ಕಾಲದಲ್ಲಿ ಕನಿಷ್ಠ ಇಬ್ಬರು ಸದಸ್ಯರು ಮತ್ತು ಪಕ್ಷಕಾರರು ಅಥವಾ ಅವರ ಪ್ರತಿರಕ್ಷಕರು ಹಾಜರಿರತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು ಮಾಡಿದ ಆದೇಶಗಳಲ್ಲಿನ ಲಿಪಿಕ ದೋಷಗಳನ್ನು ಅಥವಾ ಯಾವುದೇ ಆಕಸ್ಮಿಕ ಕೈತಪ್ಪಿನಿಂದಾಗಿ ಅಥವಾ ಲೋಪದಿಂದಾಗಿ ಅದರಲ್ಲಿ ಉಂಟಾಗಿರುವ ಯಾವುದೇ ತಪ್ಪನ್ನು ಯಾವುದೇ ಕಾಲದಲ್ಲಿ, ಆ ಸಕ್ಷಮ ಪ್ರಾಧಿಕಾರವು ತಾನಾಗಿಯೇ ಆಗಲಿ ಅಥವಾ ಈ ಬಗ್ಗೆ ಸ್ವೀಕರಿಸಲಾದ ಅರ್ಜಿಯ ಮೇಲೆ ಆಗಲಿ ಸರಿಪಡಿಸಬಹುದು.

**56. ಬಾಲಕನನ್ನು ಅಥವಾ ಮಗುವನ್ನು ಬಿಡುಗಡೆ ಮಾಡಲು ಮತ್ತು ವರ್ಗಾವಣೆ ಮಾಡಲು ಪ್ರಾಧಿಕಾರದ ಅಧಿಕಾರ.–** ಸಕ್ಷಮ ಪ್ರಾಧಿಕಾರವು ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಗುವನ್ನು ಅಥವಾ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ಬಾಲಕನ ಅಥವಾ ಮಗುವಿನ ಹಿತದೃಷ್ಟಿಯನ್ನು ಮತ್ತು ಅವನ ವಾಸ್ತವ್ಯದ ಸ್ವಾಭಾವಿಕ ಸ್ಥಳವನ್ನು ಗಮನದಲ್ಲಿಟ್ಟುಕೊಂಡು, ಸಂಪೂರ್ಣವಾಗಿಯಾಗಲಿ ಅಥವಾ ತಾನು ವಿಧಿಸುವುದು ಸೂಕ್ತವೆಂದು ಭಾವಿಸುವಂಥ ಷರತ್ತು ಮೇಲೆಯಾಗಲಿ ಮಕ್ಕಳ ಗೃಹದಿಂದ ಅಥವಾ ವಿಶೇಷ ಗೃಹದಿಂದ ಬಿಡುಗಡೆಗೊಳಿಸಬೇಕೆಂದು ಅಥವಾ ಸಂದರ್ಭಾನುಸಾರ ಇನ್ನೊಂದಕ್ಕೆ ವರ್ಗಾಯಿಸಬೇಕೆಂದು ಯಾವುದೇ ಕಾಲದಲ್ಲಿ ಆದೇಶಿಸಬಹುದು:

ಪರಂತು, ಮಕ್ಕಳ ಗೃಹ ಅಥವಾ ವಿಶೇಷ ಗೃಹ ಅಥವಾ ಸೂಕ್ತ ಸಂಸ್ಥೆಯಲ್ಲಿ ಅಥವಾ ಸೂಕ್ತ ವ್ಯಕ್ತಿಯ ಬಳಿ ಆ ಬಾಲಕ ಅಥವಾ ಮಗುವಿನ ವಾಸ್ತವ್ಯದ ಒಟ್ಟು ಅವಧಿಯನ್ನು ಅಂಥ ವರ್ಗಾವಣೆಯ ಮೂಲಕ ಹೆಚ್ಚಿಸತಕ್ಕದ್ದಲ್ಲ.

**57. ಈ ಅಧಿನಿಯಮದ ಅಡಿಯಲ್ಲಿನ ಮಕ್ಕಳ ಗೃಹಗಳ ಮತ್ತು ಭಾರತದ ವಿವಿಧ ಭಾಗಗಳಲ್ಲಿನ ಅಂಥದೇ ಸ್ವರೂಪದ ಬಾಲಕ ಗೃಹಗಳ ನಡುವೆ ವರ್ಗಾವಣೆ.–** ರಾಜ್ಯ ಸರ್ಕಾರವು ಯಾವುದೇ ಮಗುವನ್ನು ಅಥವಾ ಬಾಲಕನನ್ನು ರಾಜ್ಯದೊಳಗಿನ ಯಾವುದೇ ಮಕ್ಕಳ ಗೃಹದಿಂದ ಅಥವಾ ವಿಶೇಷ ಗೃಹದಿಂದ ಅಂಥದೇ ಸ್ವರೂಪದ ಯಾವುದೇ ಇತರ ಮಕ್ಕಳ ಗೃಹಕ್ಕೆ, ವಿಶೇಷ ಗೃಹಕ್ಕೆ ಅಥವಾ ಸಂಸ್ಥೆಗೆ ಅಥವಾ ಸಂಬಂಧಪಟ್ಟ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಮತ್ತು ಸಂದರ್ಭಾನುಸಾರ ಸಮಿತಿ ಅಥವಾ ಮಂಡಲಿಗೆ ಮೊದಲೇ ತಿಳಿಸಿ ರಾಜ್ಯದ ಹೊರಗಿನ ಅಂಥ ಸಂಸ್ಥೆಗೆ ವರ್ಗಾವಣೆ ಮಾಡುವಂತೆ ನಿರ್ದೇಶಿಸಬಹುದು, ಮತ್ತು ಅಂಥ ಆದೇಶವು ಯಾವ ಪ್ರದೇಶದ ಸಕ್ಷಮ ಪ್ರಾಧಿಕಾರಕ್ಕೆ ಆ ಮಗುವನ್ನು ಅಥವಾ ಬಾಲಕನನ್ನು ಕಳುಹಿಸಲಾಗಿದೆಯೋ ಆ ಸಕ್ಷಮ ಪ್ರಾಧಿಕಾರಿಗೆ ಜಾರಿಯಾಗುವುದಾಗಿ ಭಾವಿಸತಕ್ಕದ್ದು.

**58. ಅಸ್ವಸ್ಥ ಮನಸ್ಸಿನ ಅಥವಾ ಕುಷ್ಠರೋಗಪೀಡಿತ ಅಥವಾ ಮಾದಕವಸ್ತು ವ್ಯಸನಿಯಾದ ಬಾಲಕನ ಅಥವಾ ಮಗುವಿನ ವರ್ಗಾವಣೆ.–** ಈ ಅಧಿನಿಯಮಕ್ಕನುಸಾರವಾಗಿ ವಿಶೇಷ ಗೃಹದಲ್ಲಿ ಅಥವಾ ಮಕ್ಕಳ ಗೃಹದಲ್ಲಿ ಅಥವಾ ಆಶ್ರಯ ಗೃಹದಲ್ಲಿ ಅಥವಾ ಸಂಸ್ಥೆಯಲ್ಲಿ ಇಡಲಾದ ಯಾರೇ ಬಾಲಕನು ಅಥವಾ ಮಗುವು ಕುಷ್ಠರೋಗದಿಂದ ನರಳುತ್ತಿದ್ದಾನೆಂದು ಅಥವಾ ಅಸ್ವಸ್ಥ ಮನಸ್ಸಿನವನಾಗಿರುವನೆಂದು ಅಥವಾ ಯಾವುದೇ ನಿದ್ರಾಜನಕ ಔಷಧ ಅಥವಾ ಮನೋದ್ರೇಕಕಾರಿ ವಸ್ತುವಿನ ವ್ಯಸನಿಯಾಗಿರುವನೆಂದು ಕಂಡುಬಂದಲ್ಲಿ, ಸಕ್ಷಮ ಪ್ರಾಧಿಕಾರವು, ಅವನನ್ನು ಕುಷ್ಠರೋಗಿಗಳ ರಕ್ಷಣಾಲಯಕ್ಕೆ ಅಥವಾ ಮಾನಸಿಕ ಆಸ್ಪತ್ರೆಗೆ ಅಥವಾ ಮಾದಕ ವಸ್ತು ವ್ಯಸನಿ ಚಿಕಿತ್ಸಾ ಕೇಂದ್ರಕ್ಕೆ ಅಥವಾ ಇತರ ಸುರಕ್ಷಿತ ಸ್ಥಳಕ್ಕೆ, ಸಕ್ಷಮ ಪ್ರಾಧಿಕಾರದ ಆದೇಶದ ಮೇರೆಗೆ ಅವನನ್ನು ಇಡಲು ಅಗತ್ಯಪಡಿಸಲಾಗಿರುವಂಥ ಅವಧಿಯನ್ನು ಮೀರದಂಥ ಅವಧಿಯವರೆಗೆ ಅಥವಾ ಆ ಬಾಲಕ ಅಥವಾ ಮಗುವಿನ ಸೂಕ್ತ ಚಿಕಿತ್ಸೆಗಾಗಿ ವೈದ್ಯಾಧಿಕಾರಿಯು ಅವಶ್ಯವೆಂದು ಪ್ರಮಾಣೀಕರಿಸಬಹುದಾದಂಥ ಇನ್ನೂ ಹೆಚ್ಚಿನ ಅವಧಿಯವರೆಗೆ ಅಲ್ಲಿ ಇಡುವುದಕ್ಕಾಗಿ ಸ್ಥಳಾಂತರಿಸಬಹುದು.

**59. ಸ್ಥಳನಿಯೋಜನೆ ಮೇಲೆ ಬಾಲಕನ ಅಥವಾ ಮಗುವಿನ ಬಿಡುಗಡೆ ಮತ್ತು ಗೈರು ಹಾಜರಿ.–** (1) ಬಾಲಕನನ್ನು ಅಥವಾ ಮಗುವನ್ನು ಮಕ್ಕಳ ಗೃಹದಲ್ಲಿ ಅಥವಾ ವಿಶೇಷ ಗೃಹದಲ್ಲಿ ಇಟ್ಟಿರುವಾಗ ಮತ್ತು ಪರಿವೀಕ್ಷಣಾಧಿಕಾರಿಯು ಅಥವಾ ಸಮಾಜ ಕಾರ್ಯಕರ್ತನು ಅಥವಾ ಸರ್ಕಾರವು ಅಥವಾ ಸಂದರ್ಭಾನುಸಾರ, ಸ್ವಯಂಸೇವಾ ಸಂಸ್ಥೆಯು ನೀಡಿದ ವರದಿಯ ಆಧಾರದ ಮೇಲೆ, ಸಕ್ಷಮ ಪ್ರಾಧಿಕಾರವು, ಅಂಥ ಬಾಲಕನನ್ನು ಅಥವಾ ಮಗುವನ್ನು ಅವನ ತಂದೆ–ತಾಯಿಯೊಂದಿಗೆ ಅಥವಾ ಪಾಲಕರೊಡನೆ ವಾಸಿಸಲು ಬಾಲಕ ಅಥವಾ ಮಗುವಿಗೆ ಶಿಕ್ಷಣ ನೀಡುವುದಕ್ಕಾಗಿ ಮತ್ತು ಯಾವುದೇ ಉಪಯುಕ್ತ ವೃತ್ತಿಯಲ್ಲಿ ಅಥವಾ ಆಜೀವಿಕೆಯಲ್ಲಿ ತರಬೇತಿ ನೀಡುವುದಕ್ಕಾಗಿ ಅಥವಾ ಪುನರ್ವಸತಿ ಕಾಲದಲ್ಲಿ ಅವನನ್ನು ನೋಡಿಕೊಳ್ಳುವುದಕ್ಕಾಗಿ, ಅವನನ್ನು ಸ್ವೀಕರಿಸಲು ಮತ್ತು ಹೊಣೆಯನ್ನು ವಹಿಸಿಕೊಳ್ಳಲು ಸಿದ್ಧವಿರುವ, ಆದೇಶದಲ್ಲಿ ಹೆಸರಿಸಿದ ಯಾವನೇ ಅಧಿಕೃತ ವ್ಯಕ್ತಿಯ ಮೇಲ್ವಿಚಾರಣೆಯಲ್ಲಿಡಲು ಅನುಮತಿ ನೀಡಿ ಅಂಥ ಬಾಲಕ ಅಥವಾ ಮಗುವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಗಣಿಸಬಹುದು.

(2) ಸಕ್ಷಮ ಪ್ರಾಧಿಕಾರವು, ಯಾರೇ ಬಾಲಕನಿಗೆ ಅಥವಾ ಮಗುವಿಗೆ, ಪರೀಕ್ಷೆ, ಸಂಬಂಧಿಕರ ವಿವಾಹ, ಅತಿ ನಿಕಟವರ್ತಿಗಳ ಮರಣ ಅಥವಾ ತಂದೆ–ತಾಯಿಯರಿಗೆ ಸಂಭವಿಸಬಹುದಾದ ಅಪಘಾತ ಅಥವಾ ಗಂಭೀರ ಸ್ವರೂಪದ ಕಾಯಿಲೆ ಅಥವಾ ಅಂಥದ್ದೇ ಸ್ವರೂಪದ ಯಾವುದೇ ತುರ್ತು ವಿಶೇಷ ಸಂದರ್ಭಗಳಲ್ಲಿ ಅವನ ಪ್ರಯಾಣದ ಅವಧಿಯನ್ನು ಹೊರತುಪಡಿಸಿ, ಮೇಲ್ವಿಚಾರಣೆಯಲ್ಲಿ, ಸಾಮಾನ್ಯವಾಗಿ ಏಳು ದಿನಗಳನ್ನು ಮೀರದ ಅವಧಿಗಾಗಿ ರಜೆಯ ಮೇಲೆ ಹೋಗುವುದಕ್ಕೆ ಅವನಿಗೆ ಅವಕಾಶ ನೀಡಿ ಗೈರುಹಾಜರಿಗೆ ಅನುಮತಿಯನ್ನು ಸಹ ನೀಡಬಹುದು.

(3) ಅನುಮತಿಯನ್ನು ರದ್ದುಗೊಳಿಸಿರುವಲ್ಲಿ ಅಥವಾ ಹಿಂತೆಗೆದುಕೊಂಡಿರುವಲ್ಲಿ ಮತ್ತು ಬಾಲಕನು ಅಥವಾ ಮಗುವು ಯಾವ ಮಕ್ಕಳ ಗೃಹಕ್ಕೆ ಹಿಂತಿರುಗಬೇಕೆಂದು ಅವನಿಗೆ ಅಥವಾ ಅದಕ್ಕೆ ನಿರ್ದೇಶಿಸಲಾಗಿತ್ತೋ, ಅಲ್ಲಿಗೆ ಹಿಂದಿರುಗಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಮಂಡಲಿಯು, ಅವಶ್ಯವಾದರೆ, ಅವನನ್ನು ಅಥವಾ ಅದನ್ನು ವಶಕ್ಕೆ ತೆಗೆದುಕೊಳ್ಳುವಂತೆ ಮತ್ತು ಸಂಬಂಧಪಟ್ಟ ಗೃಹಕ್ಕೆ ಹಿಂದಕ್ಕೆ ಕಳುಹಿಸುವಂತೆ ಏರ್ಪಾಟು ಮಾಡಬಹುದು.

(4) ಈ ಪ್ರಕರಣದ ಅಡಿಯಲ್ಲಿ ನೀಡಿದ ಅಂಥ ಅನುಮತಿಗೆ ಅನುಸಾರವಾಗಿ ಸಂಬಂಧಪಟ್ಟ ಗೃಹದಿಂದ ಬಾಲಕ ಅಥವಾ ಮಗುವು ಗೈರುಹಾಜರಾಗಿರುವ ಕಾಲವನ್ನು, ಯಾವ ಕಾಲದಲ್ಲಿ ವಿಶೇಷ ಗೃಹದಲ್ಲಿ ಅವನು ಇರಲು ಬದ್ಧನಾಗಿದ್ದನೋ ಆ ಕಾಲದ ಭಾಗವೆಂಬುದಾಗಿ ಭಾವಿಸತಕ್ಕದ್ದು:

ಪರಂತು, ಅನುಮತಿಯನ್ನು ರದ್ದುಪಡಿಸಿದ ಅಥವಾ ಹಿಂತೆಗೆದುಕೊಂಡ ಮೇಲೆ ಬಾಲಕನು ವಿಶೇಷ ಗೃಹಕ್ಕೆ ಹಿಂದಿರುಗಲು ತಪ್ಪಿದಾಗ, ಹಾಗೆ ಹಿಂತಿರುಗಲು ಅವನು ತಪ್ಪಿದ ನಂತರ ಗತಿಸುವಂಥ ಕಾಲವನ್ನು ಯಾವ ಕಾಲದೊಳಗೆ ಅವನು ಸಂಸ್ಥೆಯಲ್ಲಿರಲು ಬದ್ಧನಾಗಿದ್ದನೋ ಆ ಕಾಲವನ್ನು ಲೆಕ್ಕಹಾಕುವಾಗ ಬಿಟ್ಟುಬಿಡತಕ್ಕದ್ದು.

**60. ತಂದೆ-ತಾಯಿಯಿಂದ ಕೊಡುಗೆ.-** (1) ಬಾಲಕ ಅಥವಾ ಮಗುವನ್ನು ಮಕ್ಕಳ ಗೃಹ ಅಥವಾ ವಿಶೇಷ ಗೃಹಕ್ಕೆ ಕಳುಹಿಸುವುದಕ್ಕಾಗಿ ಅಥವಾ ಆ ಬಾಲಕನನ್ನು ಸೂಕ್ತ ವ್ಯಕ್ತಿಯ ಅಥವಾ ಸೂಕ್ತ ಸಂಸ್ಥೆಯ ಪಾಲನೆಯಲ್ಲಿ ಇಡುವುದಕ್ಕಾಗಿ ಆದೇಶವನ್ನು ಮಾಡುವ ಸಕ್ಷಮ ಪ್ರಾಧಿಕಾರವು, ಆ ಬಾಲಕನನ್ನು ಅಥವಾ ಮಗುವನ್ನು ಪೋಷಿಸಲು ಹೊಣೆಗಾರರಾದ ತಂದೆ-ತಾಯಿಯು ಅಥವಾ ಇತರ ವ್ಯಕ್ತಿಯು ಅವರ ಆದಾಯಕ್ಕೆ ಅನುಸಾರವಾಗಿ ಗೊತ್ತುಪಡಿಸಿದ ರೀತಿಯಲ್ಲಿ, ಕೊಡುಗೆ ನೀಡಲು ಸಮರ್ಥರಾಗಿದ್ದರೆ ಅಗತ್ಯಪಡಿಸಿ ಒಂದು ಆದೇಶವನ್ನು ಮಾಡಬಹುದು.

(2) ಸಕ್ಷಮ ಪ್ರಾಧಿಕಾರವು, ಬಾಲಕನನ್ನು ಗೃಹದಿಂದ ಅಥವಾ ಸಾಮಾನ್ಯ ವಾಸಸ್ಥಳಕ್ಕೆ ಕಳುಹಿಸುವ ಕಾಲದಲ್ಲಿ ನಿವಾಸಿ ಬಾಲಕನ ಅಥವಾ ತಂದೆ-ತಾಯಿಯ ಅಥವಾ ಪಾಲಕನ ಅಥವಾ ಅವರಿಬ್ಬರ ಪ್ರಯಾಣಕ್ಕಾಗಿ ಗೊತ್ತುಪಡಿಸಬಹುದಾದಂಥ ವೆಚ್ಚಗಳನ್ನು ಸಂದಾಯ ಮಾಡಲು ಗೃಹದ ಅಧೀಕ್ಷಕರು ಅಥವಾ ಯೋಜನಾ ವ್ಯವಸ್ಥಾಪಕರು ಬಡ ತಂದೆ-ತಾಯಿ ಅಥವಾ ಪಾಲಕನಿಗೆ ಅವಶ್ಯವಿದ್ದರೆ ಸಂದಾಯವನ್ನು ಮಾಡುವಂತೆ ನಿರ್ದೇಶಿಸಬಹುದು.

**61. ನಿಧಿ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ವ್ಯವಹರಿಸುತ್ತಿರುವ ಬಾಲಕ ಅಥವಾ ಮಗುವಿನ ಕಲ್ಯಾಣ ಮತ್ತು ಪುನರ್ವಸತಿಗಾಗಿ ತಾನು ಸೂಕ್ತವೆಂದು ಭಾವಿಸುವಂಥ ಹೆಸರಿನಲ್ಲಿ ನಿಧಿಯೊಂದನ್ನು ಸೃಜಿಸಬಹುದು.

(2) ಆ ನಿಧಿಗೆ ಯಾರೇ ವ್ಯಕ್ತಿ ಅಥವಾ ಸಂಘ ಸಂಸ್ಥೆಯು ನೀಡಬಹುದಾದಂಥ ಸ್ವಇಚ್ಛೆಯ ದೇಣಿಗೆಗಳನ್ನು, ಕೊಡುಗೆಗಳನ್ನು ಅಥವಾ ಚಂದಾಗಳನ್ನು ಜಮೆ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಸೃಜಿಸಲಾದ ನಿಧಿಯನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ರಾಜ್ಯ ಸಲಹಾ ಮಂಡಲಿಯು ನಿರ್ವಹಿಸತಕ್ಕದ್ದು.

**62. ಕೇಂದ್ರ, ರಾಜ್ಯ, ಜಿಲ್ಲಾ ಮತ್ತು ನಗರ ಸಲಹಾ ಮಂಡಲಿಗಳು.-** (1) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಗೃಹಗಳ ಸ್ಥಾಪನೆ ಮತ್ತು ನಿರ್ವಹಣೆ, ಸಂಪನ್ಮೂಲಗಳ ಸಂಗ್ರಹಣೆ, ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳ ಮತ್ತು ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರ ಶಿಕ್ಷಣ, ತರಬೇತಿ ಮತ್ತು ಪುನರ್ವಸತಿಗಾಗಿ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಮತ್ತು ಸಂಬಂಧಪಟ್ಟ ಹಲವಾರು ಸರ್ಕಾರಿ ಮತ್ತು ಸರ್ಕಾರೇತರ ಏಜೆನ್ಸಿಗಳ ನಡುವೆ ಪರಸ್ಪರ ಸಮನ್ವಯಕ್ಕಾಗಿ ಆ ಸರ್ಕಾರಕ್ಕೆ ಸಲಹೆ ನೀಡಲು ಕೇಂದ್ರ ಅಥವಾ ಸಂದರ್ಭಾನುಸಾರ ರಾಜ್ಯ ಸಲಹಾ ಮಂಡಲಿಯನ್ನು ರಚಿಸಬಹುದು.

(2) ಕೇಂದ್ರ ಅಥವಾ ರಾಜ್ಯ ಸಲಹಾ ಮಂಡಲಿಯು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು, ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅದು ಖ್ಯಾತ ಸಮಾಜ ಸೇವಾ ಕಾರ್ಯಕರ್ತರನ್ನು, ಕಾರ್ಪೋರೇಟ್ ವಲಯದ ಮಕ್ಕಳ ಕಲ್ಯಾಣದ ಕ್ಷೇತ್ರದಲ್ಲಿನ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು, ಶಿಕ್ಷಣ ತಜ್ಞರನ್ನು, ವೈದ್ಯಕೀಯ ವೃತ್ತಿಗರನ್ನು ಮತ್ತು ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳನ್ನು ಸಹ ಒಳಗೊಂಡಿರತಕ್ಕದ್ದು.

(3) ಈ ಅಧಿನಿಯಮದ 35ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಜಿಲ್ಲಾ ಅಥವಾ ನಗರಮಟ್ಟದ ಪರಿವೀಕ್ಷಣಾ ಸಮಿತಿಯು ಜಿಲ್ಲಾ ಅಥವಾ ನಗರ ಸಲಹಾ ಮಂಡಲಿಗಳಾಗಿಯೂ ಕಾರ್ಯನಿರ್ವಹಿಸತಕ್ಕದ್ದು.

**62ಎ. ಈ ಅಧಿನಿಯಮದ ಜಾರಿಗೆ ಜವಾಬ್ದಾರಿ ಹೊಂದಿರುವ ಮಕ್ಕಳ ರಕ್ಷಣಾ ಘಟಕದ ರಚನೆ.-** ಪ್ರತಿಯೊಂದು ರಾಜ್ಯ ಸರ್ಕಾರವು, ಗೃಹಗಳ ಸ್ಥಾಪನೆ ಮತ್ತು ನಿರ್ವಹಣೆ, ಈ ಮಕ್ಕಳಿಗೆ ಮತ್ತು ಅವರ ಪುನರ್ವಸತಿಗೆ ಸಂಬಂಧಪಟ್ಟ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸುವುದಕ್ಕೆ ಸಂಬಂಧಿಸಿದಂತೆ ಮತ್ತು ಸಕ್ಷಮ ಪ್ರಾಧಿಕಾರಗಳು ಹೊರಡಿಸಿದ ಅಧಿಸೂಚನೆಯೂ ಸೇರಿದಂತೆ ಈ ಅಧಿನಿಯಮದ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಮತ್ತು ಕಾನೂನಿನ ಜೊತೆ ಸಂಘರ್ಷವಿರುವ ಬಾಲಕರಿಗೆ ಸಂಬಂಧಪಟ್ಟ ವಿಷಯಗಳನ್ನು ಕೈಗೆತ್ತಿಕೊಳ್ಳಲು, ಆ ಸರ್ಕಾರವು ನೇಮಿಸಬಹುದಾದಂಥ ಅಧಿಕಾರಿಗಳು ಮತ್ತು ಇತರ ನೌಕರರನ್ನು ಒಳಗೊಂಡಿರುವ ರಾಜ್ಯಕ್ಕಾಗಿ ಮಕ್ಕಳ ರಕ್ಷಣಾ ಘಟಕವನ್ನು ಮತ್ತು ಪ್ರತಿಯೊಂದು ಜಿಲ್ಲೆಗಾಗಿ ಅಂಥ ಘಟಕಗಳನ್ನು ರಚಿಸತಕ್ಕದ್ದು.

**63. ಬಾಲಕರ ವಿಶೇಷ ಪೊಲೀಸ್ ಘಟಕ.–** (1) ಈ ಅಧಿನಿಯಮದ ಅಡಿಯಲ್ಲಿ ಬಾಲಕರೊಂದಿಗೆ ಆಗಾಗ ಅಥವಾ ಅವರೊಂದಿಗೆ ಮಾತ್ರ ವ್ಯವಹರಿಸುವ ಅಥವಾ ಮೂಲತಃ ಬಾಲಕರ ಅಪರಾಧವನ್ನು ತಡೆಯುವಲ್ಲಿ ನಿರತರಾಗಿರುವ ಅಥವಾ ಬಾಲಕರು ಅಥವಾ ಮಕ್ಕಳನ್ನು ನಿಭಾಯಿಸುವ ಪೊಲೀಸ್ ಅಧಿಕಾರಿಗಳು ತಮ್ಮ ಪ್ರಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಅವರಿಗೆ ವಿಶೇಷವಾಗಿ ಶಿಕ್ಷಣ ಮತ್ತು ತರಬೇತಿ ನೀಡತಕ್ಕದ್ದು.

(2) ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಅಭಿರುಚಿ ಮತ್ತು ಸೂಕ್ತ ತರಬೇತಿ ಮತ್ತು ಪುನರ್‌ಮನನ ಹೊಂದಿದ ಕನಿಷ್ಠ ಒಬ್ಬ ಅಧಿಕಾರಿಯನ್ನು "ಬಾಲಕ ಅಥವಾ ಮಗುವಿನ ಕಲ್ಯಾಣ ಅಧಿಕಾರಿ" ಎಂದು ಹೆಸರಿಸಬಹುದು, ಆತನು ಪೊಲೀಸರ ಸಮನ್ವಯದೊಂದಿಗೆ ಬಾಲಕನನ್ನು ಅಥವಾ ಮಗುವನ್ನು ನಿಭಾಯಿಸತಕ್ಕದ್ದು.

(3) ಬಾಲಕರನ್ನು ಮತ್ತು ಮಕ್ಕಳನ್ನು ನಿಭಾಯಿಸಲು ಮೇಲೆ ಹೇಳಿದಂತೆ ಹೆಸರಿಸಲಾದ ಎಲ್ಲ ಪೊಲೀಸ್ ಅಧಿಕಾರಿಗಳು ಸದಸ್ಯರಾಗಿರಬೇಕಾದ ಬಾಲಕರ ವಿಶೇಷ ಪೊಲೀಸ್ ಘಟಕವನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ನಗರದಲ್ಲಿ ಬಾಲಕರ ಮತ್ತು ಮಕ್ಕಳ ಜೊತೆಗೆ ಪೊಲೀಸರ ವರ್ತನೆಯನ್ನು ಸಮನ್ವಯಗೊಳಿಸಲು ಮತ್ತು ಉತ್ತಮಗೊಳಿಸಲು ಸೃಜಿಸಬಹುದು.

**64. ಈ ಅಧಿನಿಯಮದ ಪ್ರಾರಂಭದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕ.–** ಈ ಅಧಿನಿಯಮವನ್ನು ಜಾರಿಗೆ ತರಲಾಗಿರುವಂಥ ಯಾವುದೇ ಪ್ರದೇಶದಲ್ಲಿ, ರಾಜ್ಯ ಸರ್ಕಾರವು, ಈ ಅಧಿನಿಯಮದ ಪ್ರಾರಂಭದಂದು ಯಾವುದೇ ಕಾರಾವಾಸ ಶಿಕ್ಷೆಯನ್ನು ಅನುಭವಿಸುತ್ತಿರುವ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನನ್ನು, ಅಂಥ ಶಿಕ್ಷೆಯನ್ನು ಅನುಭವಿಸುವುದಕ್ಕೆ ಬದಲು ಆ ಶಿಕ್ಷೆಯ ಉಳಿದ ಅವಧಿಯವರೆಗೆ ವಿಶೇಷ ಗೃಹಕ್ಕೆ ಕಳುಹಿಸತಕ್ಕದ್ದೆಂದು ಅಥವಾ ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸುವಂಥ ರೀತಿಯಲ್ಲಿ ಅರ್ಹ ಸಂಸ್ಥೆಯಲ್ಲಿ ಇಡತಕ್ಕದ್ದೆಂದು ನಿರ್ದೇಶಿಸತಕ್ಕದ್ದು; ಮತ್ತು ಈ ಅಧಿನಿಯಮದ ಉಪಬಂಧಗಳು ಆ ಬಾಲಕನನ್ನು ಮಂಡಲಿಯು ಅಂಥ ವಿಶೇಷ ಗೃಹಕ್ಕೆ ಅಥವಾ ಸಂಸ್ಥೆಗೆ ಕಳುಹಿಸುವಂತೆ ಅವನಿಗೆ ಆದೇಶಿಸಲಾಗಿದ್ದರೆ ಅಥವಾ ಸಂದರ್ಭಾನುಸಾರ, ಈ ಅಧಿನಿಯಮದ 16ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಪಾಲನೆ ಪೋಷಣೆಯಲ್ಲಿಡಲು ಆದೇಶಿಸಲಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು:

ಪರಂತು, ಕಾರಾವಾಸ ಶಿಕ್ಷೆ ಅನುಭವಿಸುತ್ತಿರುವ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನು ಈ ಅಧಿನಿಯಮದ ಪ್ರಾರಂಭದಂದು ಅಥವಾ ಅದಕ್ಕೂ ಮುಂಚೆ ಹಾಗೆ ಬಾಲಕನಾಗಿರುವುದು ನಿಂತು ಹೋಗಿರುವ ಪ್ರಕರಣವನ್ನು ಪುನರವಲೋಕಿಸತಕ್ಕದ್ದು, ಮತ್ತು ಅಂಥ ಬಾಲಕನ ಹಿತದೃಷ್ಟಿಯಿಂದ ರಾಜ್ಯ ಸರ್ಕಾರವು, ಅಥವಾ ಸಂದರ್ಭಾನುಸಾರ ಮಂಡಲಿಯು ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಸಮುಚಿತ ಆದೇಶವನ್ನು ಮಾಡಬಹುದು.

**ವಿವರಣೆ.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಯಾವುದೇ ಹಂತದಲ್ಲಿ ಕಾರಾವಾಸ ಶಿಕ್ಷೆ ಅನುಭವಿಸುತ್ತಿರುವ ಕಾನೂನಿನ ಜೊತೆ ಸಂಘರ್ಷವಿರುವ ಬಾಲಕನ ಎಲ್ಲಾ ಪ್ರಕರಣಗಳಲ್ಲಿ ಬಾಲಕತ್ವದ ವಿವಾದವನ್ನು ಒಳಗೊಂಡಂತೆ ಅವನ ಪ್ರಕರಣವನ್ನು ಮತ್ತು ಅಂಥ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಅವನು ಬಾಲಕನಾಗಿರುವುದು ನಿಂತು ಹೋಗಿದೆಯೆಂಬ ಸಂಗತಿಯನ್ನು ಗಣಿಸದೆ, ಬಾಲಕತ್ವದ ವಿವಾದವನ್ನು ಒಳಗೊಂಡಂತೆ ಅವನ ಪ್ರಕರಣವನ್ನು 2ನೇ ಪ್ರಕರಣದ (ಎಲ್) ಖಂಡದ ನಿಬಂಧನೆಗಳಿಗೆ ಮತ್ತು ಈ ಅಧಿನಿಯಮದಲ್ಲಿ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಲ್ಲಿ ಒಳಗೊಂಡಿರುವ ಇತರ ಉಪಬಂಧಗಳಿಗೆ ಅನುಸಾರವಾಗಿ ತೀರ್ಮಾನಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಯ ಉಳಿದ ಅವಧಿಗಾಗಿ ಅವನನ್ನು ವಿಶೇಷ ಗೃಹಕ್ಕೆ ಅಥವಾ ಸಂದರ್ಭಾನುಸಾರ ಸೂಕ್ತ ಸಂಸ್ಥೆಗೆ ಕಳುಹಿಸತಕ್ಕದ್ದು, ಆದರೆ ಅಂಥ ಶಿಕ್ಷೆಯು ಯಾವುದೇ ಪ್ರಕರಣದಲ್ಲಿ ಈ ಅಧಿನಿಯಮದ 15ನೇ ಪ್ರಕರಣದಲ್ಲಿ ಉಪಬಂಧಿಸಲಾದ ಗರಿಷ್ಠ ಅವಧಿಯನ್ನು ಮೀರತಕ್ಕದ್ದಲ್ಲ.

**65. ಬಂಧಪತ್ರಗಳಿಗೆ ಸಂಬಂಧಿಸಿದ ಪ್ರಕ್ರಿಯೆ.–** ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) XXXIIIನೇ ಅಧ್ಯಾಯದ ಉಪಬಂಧಗಳು, ಈ ಅಧಿನಿಯಮದ ಅಡಿಯಲ್ಲಿ ತೆಗೆದುಕೊಂಡ ಬಂಧಪತ್ರಗಳಿಗೆ ಆದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**66. ಅಧಿಕಾರಗಳ ಪ್ರತ್ಯಾಯೋಜನೆ.–** ರಾಜ್ಯ ಸರ್ಕಾರವು, ಸಾಮಾನ್ಯ ಆದೇಶದ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ಅದು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಆ ಆದೇಶದಲ್ಲಿ ಗೊತ್ತುಪಡಿಸಬಹುದಾದಂಥ ಸಂದರ್ಭಗಳು ಮತ್ತು ಅಂಥ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳನ್ನು ಆ ಸರ್ಕಾರಕ್ಕೆ ಅಧೀನನಾದ ಯಾರೇ ಅಧಿಕಾರಿಯು ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**67. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳು ಅಥವಾ ಆದೇಶಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ಅಥವಾ ಅನಾಥಾಲಯಗಳನ್ನು ನಡೆಸುತ್ತಿರುವ ಸ್ವಯಂಸೇವಾ ಸಂಸ್ಥೆಯ ಅಥವಾ ಈ ಅಧಿನಿಯಮದ ಅನುಸರಣೆಯಲ್ಲಿ ನೇಮಕಗೊಂಡ ಯಾರೇ ಅಧಿಕಾರಿಯ ಅಥವಾ ಸಿಬ್ಬಂದಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**68. ನಿಯಮಗಳನ್ನು ರಚಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ನಿಯಮಗಳನ್ನು ರಚಿಸಬಹುದೋ ಆ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ಮಾದರಿ ನಿಯಮಗಳನ್ನು ರಚಿಸಬಹುದು, ಮತ್ತು ಅಂಥ ಯಾವುದೇ ವಿಷಯದ ಸಂಬಂಧದಲ್ಲಿ ಅಂಥ ಯಾವುದೇ ಮಾದರಿ ನಿಯಮಗಳನ್ನು ರಚಿಸಲಾಗಿರುವಲ್ಲಿ ಅಂಥ ರಾಜ್ಯ ಸರ್ಕಾರವು ಆ ವಿಷಯದ ಸಂಬಂಧದಲ್ಲಿ ನಿಯಮಗಳನ್ನು ರಚಿಸುವವರೆಗೆ ಅವು ರಾಜ್ಯಕ್ಕೆ ಅನ್ವಯವಾಗತಕ್ಕದ್ದು ಮತ್ತು ಅಂಥ ನಿಯಮಗಳನ್ನು ರಚಿಸುವಾಗ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅವು ಅಂಥ ಮಾದರಿ ನಿಯಮಗಳಿಗೆ ಅನುಸಾರವಾಗಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(i) ಮಂಡಲಿಯ ಸದಸ್ಯರ ಪದಾವಧಿ ಮತ್ತು ಅಂಥ ಸದಸ್ಯನು 4ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ರಾಜೀನಾಮೆ ನೀಡಬಹುದಾದ ರೀತಿ;

(ii) ಮಂಡಲಿಯು, ಅದರ ಸಭೆಗಳನ್ನು ನಡೆಸಬಹುದಾದ ಕಾಲ ಮತ್ತು 5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅದರ ಸಭೆಗಳಲ್ಲಿ ಕಾರ್ಯಕಲಾಪ ನಡೆಸುವ ಸಂಬಂಧದಲ್ಲಿ ಪ್ರಕ್ರಿಯಾ ನಿಯಮಗಳು;

(iii) ಪರಿವೀಕ್ಷಣಾಲಯಗಳು ಒದಗಿಸಬೇಕಾದ ವಿವಿಧ ಸೇವಾ ಪ್ರಕಾರಗಳು ಮತ್ತು ಗುಣಮಟ್ಟಗಳೂ ಸೇರಿದಂತೆ ಪರಿವೀಕ್ಷಣಾಲಯಗಳ ವ್ಯವಸ್ಥಾಪನೆ ಮತ್ತು ಯಾವ ಸನ್ನಿವೇಶಗಳಲ್ಲಿ ಮತ್ತು ರೀತಿಯಲ್ಲಿ ಪರಿವೀಕ್ಷಣಾಲಯವೆಂದು ಪ್ರಮಾಣೀಕರಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಸನ್ನಿವೇಶಗಳು ಮತ್ತು ರೀತಿ ಮತ್ತು 8ನೇ ಪ್ರಕರಣದಲ್ಲಿ ಉಲ್ಲೇಖಿಸಿದಂಥ ಇತರೆ ವಿಷಯಗಳು;

(iv) ವಿಶೇಷ ಗೃಹಗಳು ಒದಗಿಸಬೇಕಾದ ವಿವಿಧ ಸೇವಾ ಪ್ರಕಾರಗಳು ಮತ್ತು ಗುಣಮಟ್ಟಗಳೂ ಸೇರಿದಂತೆ ವಿಶೇಷ ಗೃಹಗಳ ವ್ಯವಸ್ಥಾಪನೆ ಮತ್ತು ಯಾವ ಸನ್ನಿವೇಶಗಳಲ್ಲಿ ಮತ್ತು ರೀತಿಯಲ್ಲಿ ವಿಶೇಷ ಗೃಹವೆಂದು ಪ್ರಮಾಣೀಕರಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಸನ್ನಿವೇಶಗಳು ಮತ್ತು ರೀತಿ ಮತ್ತು 9ನೇ ಪ್ರಕರಣದಲ್ಲಿ ಉಲ್ಲೇಖಿಸಿದಂಥ ಇತರೆ ವಿಷಯಗಳು;

(v) ಕಾನೂನಿನ ಜೊತೆ ಸಂಘರ್ಷವಿರುವ ಯಾರೇ ಬಾಲಕನನ್ನು ಮಂಡಲಿಯಲ್ಲಿ ಯಾರ ಮುಂದೆ ಹಾಜರುಪಡಿಸಬಹುದೋ ಆ ವ್ಯಕ್ತಿಗಳು ಮತ್ತು 10ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಬಾಲಕನನ್ನು ಪರಿವೀಕ್ಷಣಾಲಯಕ್ಕೆ ಕಳುಹಿಸುವ ರೀತಿ;

(vi) 19ನೇ ಪ್ರಕರಣದ ಅಡಿಯಲ್ಲಿ ಬಾಲಕನ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಅನರ್ಹತೆಯನ್ನು ತೊಡೆದುಹಾಕುವುದಕ್ಕೆ ಸಂಬಂಧಪಟ್ಟ ವಿಷಯಗಳು;

(vii) ಅಧ್ಯಕ್ಷರ ಮತ್ತು ಸದಸ್ಯರುಗಳ ಅರ್ಹತೆಗಳು, ಮತ್ತು 29ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅವರನ್ನು ನೇಮಕ ಮಾಡಬಹುದಾದ ಅವಧಿ;

(viii) ಸಮಿತಿಯ ಸಭೆಗಳ ಕಾಲ ಮತ್ತು 30ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅದರ ಸಭೆಯಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಸಂಬಂಧದಲ್ಲಿನ ಪ್ರಕ್ರಿಯಾ ನಿಯಮಗಳು;

(ix) 32ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ವಿಚಾರಣೆಯು ಇತ್ಯರ್ಥದಲ್ಲಿರುವಾಗ ಪೊಲೀಸರಿಗೆ ಮತ್ತು ಸಮಿತಿಗೆ ವರದಿ ಮಾಡುವ ರೀತಿ ಮತ್ತು ಮಗುವನ್ನು ಮಕ್ಕಳ ಗೃಹಗಳಿಗೆ ಕಳುಹಿಸುವ ಮತ್ತು ಅದರ ವಶಕ್ಕೆ ವಹಿಸಿಕೊಡುವ ರೀತಿ;

(x) ಮಕ್ಕಳ ಗೃಹಗಳ ಗುಣಮಟ್ಟಗಳು ಮತ್ತು ಅವು ಒದಗಿಸಬೇಕಾದ ಸೇವಾ ಸ್ವರೂಪಗಳೂ ಸೇರಿದಂತೆ ಮಕ್ಕಳ ಗೃಹಗಳ ನಿರ್ವಹಣೆ ಮತ್ತು ಮಕ್ಕಳ ಗೃಹವೆಂದು ಪ್ರಮಾಣೀಕರಿಸುವ ಅಥವಾ 34ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಸ್ವಯಂಸೇವಾ ಸಂಸ್ಥೆಗೆ ಮಾನ್ಯತೆಯನ್ನು ನೀಡುವ ಅಥವಾ ಹಿಂತೆಗೆದುಕೊಳ್ಳಬಹುದಾದ ರೀತಿ ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ಸಂಸ್ಥೆಗಳನ್ನು ನೋಂದಣಿ ಮಾಡುವ ರೀತಿ;

(xi) ಮಕ್ಕಳ ಗೃಹಗಳಿಗಾಗಿ ಪರಿವೀಕ್ಷಣಾ ಸಮಿತಿಗಳ ನೇಮಕ, ಅವುಗಳ ಅಧಿಕಾರಾವಧಿ ಮತ್ತು ಪರಿವೀಕ್ಷಣಾ ಸಮಿತಿಗಳನ್ನು ನೇಮಕ ಮಾಡುವ ಉದ್ದೇಶಗಳು ಮತ್ತು 35ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಇತರೆ ವಿಷಯಗಳು;

(xii) 37ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಆಶ್ರಯ ಗೃಹಗಳು ಒದಗಿಸಬೇಕಾದ ಸೌಲಭ್ಯಗಳು;

(xiiಎ) 41ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದತ್ತಕ ಸ್ವೀಕಾರದಲ್ಲಿ ಮಾಡಬಹುದಾದ ಪುನರ್ವಸತಿ ವ್ಯವಸ್ಥೆ, (3)ನೇ ಉಪಪ್ರಕರಣದ ಅಡಿಯಲ್ಲಿ ಮಾರ್ಗಸೂಚಿಗಳ ಅಧಿಸೂಚನೆ ಮತ್ತು (4)ನೇ ಉಪ ಪ್ರಕರಣದ ಅಡಿಯಲ್ಲಿ ವಿಶೇಷ ದತ್ತಕ ಏಜೆನ್ಸಿಗಳಿಗೆ ಮನ್ನಣೆ ನೀಡುವ ರೀತಿ;

(xiii) 42ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಮಕ್ಕಳನ್ನು ಸಾಕಿ ಸಲಹುವ ಕಾರ್ಯಕ್ರಮದ ಯೋಜನೆಯನ್ನು ಕಾರ್ಯಗತಗೊಳಿಸುವುದು;

(xiv) 43ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಮಕ್ಕಳ ಪ್ರಾಯೋಜಕತ್ವದ ಬೇರೆ ಬೇರೆ ಯೋಜನೆಗಳನ್ನು ಕಾರ್ಯಗತಗೊಳಿಸುವುದು;

(xv) 44ನೇ ಪ್ರಕರಣದ ಅಡಿಯಲ್ಲಿ ಅನುಪಾಲನಾ ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯಗಳು;

(xvi) 45ನೇ ಪ್ರಕರಣದ ಅಡಿಯಲ್ಲಿ ಮಗುವಿನ ಪುನರ್ವಸತಿ ಮತ್ತು ಸಮಾಜದಲ್ಲಿ ಬೆರೆಯಲು ಅನುಕೂಲ ಮಾಡಿಕೊಡುವುದಕ್ಕಾಗಿ ಬೇರೆ ಬೇರೆ ಏಜೆನ್ಸಿಗಳ ನಡುವೆ ಪರಿಣಾಮಕಾರಿ ಸಂಪರ್ಕಗಳ ಬಗ್ಗೆ ಖಾತರಿಪಡಿಸಿಕೊಳ್ಳುವುದು;

(xvii) 61ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿನ ನಿಧಿಯನ್ನು ನಿರ್ವಹಿಸುವ ಉದ್ದೇಶಗಳು ಮತ್ತು ರೀತಿ;

(xviii) ಗೊತ್ತುಪಡಿಸಬೇಕಾದ ಅಥವಾ ಗೊತ್ತುಪಡಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಮೇಲೆ ಹೇಳಲಾದ ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ

ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(4) ಈ ಅಧಿನಿಯಮದ ಅಡಿಯಲ್ಲಿ, ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಆ ರಾಜ್ಯದ ವಿಧಾನ ಮಂಡಲದ ಮುಂದೆ ಇಡತಕ್ಕದ್ದು.

**69. ನಿರಸನ ಮತ್ತು ಉಳಿಸುವಿಕೆಗಳು.–** (1) ಬಾಲಕ ನ್ಯಾಯ ಅಧಿನಿಯಮ, 1986 (1986ರ 53) ಇದು ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**70. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಹಾಗೆ ತೊಂದರೆಯನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ನಂತರ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಆದರೂ, ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

* * *